ಜನಪದ ಸೇವಕ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೪ ಡಿಸೆಂಬರ್ ೨೦೦೩ ಸಂಚಿಕೆ ೫

ಅರಣ್ಯ ನಾಶವಾದರೆ ಭವಿಷ್ಯ ಆಗುವುದು ಶೂನ್ಯ



ಹಿಂಸಾಮುಖಿ ಜನಾಂದೋಲನಗಳು ಎಷ್ಟು ಸೂಕ್ತ ? ಎಷ್ಟು ಸಾಧ್ಯ ?

* ಈ ಸಂಚಿಕೆಯಲ್ಲಿ *

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜಸ್ಟ್

ಸಂಪುಟ ೪
ಸಂಚಿಕೆ ೫

ಡಿಸೆಂಬರ್ ೨೦೦೩

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾಟ್ರಸ್ಟ್(ರಿ.)
ಮೇಲುಕೋಟೆ - ೫೭೧ ೪೩೧
ಜಿಲ್ಲಾ ಮಂಡ್ಯ

ದೂರವಾಣಿ
೦೮೨೩೬-೨೯೮೭೫೪

e-mail - janapada@yahoo.com

ಹೆದ್ದಾರಿಯಾದೀತು

ಕೃಷ್ಣನಿಗೆ ಭಾಷೆ ಬಾರದಿದ್ದರೇನಂತೆ?
ಅವನನ್ನು ನಾವು ಕರಿಯ ಎನ್ನುವ
ದನ ಕಾಯುವವ ಎನ್ನುವ
ಸಾವಿರಾರು ಹೆಂಡಿರ ಗಂಡ ಎನ್ನುವ
ನಮ್ಮ ಜರಿಯುವಿಕೆಗಾದರೂ ಆತ ಜಗ್ಗಲಾರನೆ?॥೧॥

ಅಲ್ಲಾನಿಗೆ ಭಾಷೆ ಬಾರದಿದ್ದರೇನಂತೆ?
ಅವನನ್ನು ನಾವು ಸೊನ್ನೆ ಎನ್ನುವ
ಕೈಲಾಗದವ ಎನ್ನುವ
ಅಡಗಿ ಕುಳಿತ ಅದೃಶ್ಯ ಎನ್ನುವ
ನಮ್ಮ ಜಿಗುಪ್ಸೆಗಾದರೂ ಆತ ಜಗ್ಗಲಾರನೆ? ॥೨॥

ಏಸುವಿಗೆ ಭಾಷೆ ಬರದಿದ್ದರೇನಂತೆ?
ಅವನನ್ನು ನಾವು ಶಿಲುಬೆಗೇರಿಸುವ
ಮೊಳೆಹೊಡೆಯುವ
ಎಳೆತಂದು ಕೊಟ್ಟಿಗೆಯಲ್ಲಿ ಹೂಳುವ
ನಮ್ಮ ಕೃತ್ಯಕ್ಕಾದರೂ ಆತ ಜಗ್ಗಲಾರನೆ? ॥೩॥

ಬುದ್ಧನಿಗೆ ಭಾಷೆ ಬಾರದಿದ್ದರೇನಂತೆ?
ಅವನನ್ನು ನಾವು ಜಡ ಎನ್ನುವ
ನಿದ್ದೆಬುರುಕ ಎನ್ನುವ
ನಿಲುಕದ ಅವಿವೇಕಿ ಅನ್ನುವ
ನಮ್ಮ ಬಹಿಷ್ಕಾರಕ್ಕಾದರೂ ಆತ ಜಗ್ಗಲಾರನೆ?॥೪॥

ಇರಲಿ ಬಿಡು ಗೆಳೆಯ, ಇವರೆಲ್ಲ ಆಗಿಹೋದವರು.
ಹಿಂಸೆಇವರಿಗೆ..ಸಾಮಾನ್ಯ..ಹೆಚ್ಚೆಂದರೆ ನಗುತ್ತಾರೆ
ನಗುವವರನ್ನು ನಂಬುವುದರಲ್ಲಿ ಅರ್ಥವಿಲ್ಲ.
ನಾವೇ ಬೇರೊಂದು ದಾರಿ ಹಿಡಿಯೋಣ,
ಅದೇ ಹೆದ್ದಾರಿ ಯಾದೀತು..!
ಗುಂಡಿಗೆ ಇದ್ದವರೆಲ್ಲಾ ನಮ್ಮೊಂದಿಗೆ
ಜೊತೆಯಾದಾರು.....

* ಪೂರ್ಣಪ್ರಜ್ಞ, ಬೇಳೂರು.

ವಿಚಾರ ದೀಪ್ತಿ....

ಹಿಂದಿನಿಂದಲೂ ಮಹಿಳಾ ಚಳುವಳಿಗಳು ಮಹಿಳೆಯ ಸಮಸ್ಯೆಗಳ ಇತ್ಯರ್ಥಕ್ಕಾಗಿ ಹೋರಾಡುತ್ತಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಮೇಲ್ಜಾತಿಯ ಮೇಲ್ವರ್ಗದ ಮಹಿಳೆಯರ ಸಮಸ್ಯೆಗಳಿಗಾಗಿ ಹೋರಾಡುವುದರಲ್ಲೇ ತಮ್ಮ ಇಡೀ ಶಕ್ತಿಯನ್ನು ಇವರು ವ್ಯರ್ಥಗೊಳಿಸುತ್ತಿದ್ದಾರೆಯೇ ಹೊರತು, ಹಳ್ಳಿಗಳಲ್ಲಿ ಜಾತಿಯ ಹಿನ್ನೆಲೆಯಲ್ಲಿ ಅಪಮಾನ, ಅತ್ಯಾಚಾರಕ್ಕೊಳಗಾಗುವ ಮಹಿಳೆಯರಾಗಲೀ ಅಥವಾ ನಗರಗಳಲ್ಲಿ ಕೇವಲ ಐದು ರೂಪಾಯಿಗಾಗಿ ದಿನವಿಡೀ ಸಾವಿರಗಟ್ಟಲೇ ಅಗರಬತ್ತಿಗಳನ್ನು ಹೊಸೆಯುವ, ಬೀಡಿ ಸುತ್ತುವುದರಲ್ಲೇ ತಮ್ಮ ಜೀವ ಸವೆಸುವ ಮಹಿಳೆಯರಾಗಲೀ ಇದುವರೆಗೂ ಯಾವ ಮಹಿಳಾ ಸಂಘಟನೆಗಳ ಕಣ್ಣಿಗೆ ಬಿದ್ದಿಲ್ಲ. ಯಾಕೆ? ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನವೆಂಬುದು ಮೇಲ್‌ಸ್ತರದ ಉದ್ಯಮ, ಉದ್ಯೋಗಗಳಲ್ಲಿ ಒಂದಷ್ಟು ಕಂಡರೂ ಕಟ್ಟಡ ಕಟ್ಟಲು ಇಟ್ಟಿಗೆ, ಸೈಜುಗಲ್ಲು ಹೊರುವ ಮಹಿಳೆಯ ಸ್ಥಿತಿ ಯಾವತ್ತೂ ಬದಲಾಗುವುದಿಲ್ಲ. ಎಷ್ಟೇ ವರ್ಷಗಳು ದುಡಿದರೂ ಅವರನ್ನು ಹೆಲ್ಪರ್‌ಸರಂತೆ ಮಾತ್ರ ನೋಡಲಾಗುತ್ತದೆಯೇ ಹೊರತು ನುರಿತ ಕಾರ್ಮಿಕರನ್ನಾಗಿ ಪರಿಗಣಿಸಲಾಗುವುದಿಲ್ಲ. ಯಾಕೆ? ಮಹಿಳಾ ಚಳುವಳಿಗಳು ಈ ಇಟ್ಟಿಗೆ ಸೈಜುಗಲ್ಲು ಹೊರುವ ಮಹಿಳೆಯರ ಕೆಲಸವನ್ನು ನೌಕರಿಯೆಂದು ಪರಿಗಣಿಸುವುದಿಲ್ಲವೆ? ಅಥವಾ ಕಟ್ಟಡ ನಿರ್ಮಾಣದಲ್ಲಿ ಭಾರ ಹೊರುವ ಮಹಿಳೆಯರನ್ನು ಮಹಿಳೆಯರೆಂದೇ ಪರಿಗಣಿಸುವುದಿಲ್ಲವೆ?

ಸ್ಲಂಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ಬಹಳಷ್ಟು ತೊಂದರೆಗಳಾಗುತ್ತಿರುವುದು ಸ್ಲಂನಲ್ಲಿನ ಮಹಿಳೆಯರು. ತಮ್ಮ ದಿನನಿತ್ಯದ ದೇಹಭಾದೆ ನೀಗಿಕೊಳ್ಳಲೂ ಆಗದಂತಹ ಪರಿಸ್ಥಿತಿ ಸ್ಲಂಗಳಲ್ಲಿದೆ. ಇಂತಹ ಅನಾರೋಗ್ಯದ ಪರಿಸರದಲ್ಲಿ ಆಕೆ ಜನ್ಮ ನೀಡುವ ಮಗುವಿನ ಆರೋಗ್ಯದ ಪಾಡು, ದಿನವೂ ಕುಡಿದು ಬಂದು ಬಡಿಯುವ ಗಂಡ, ಬೆಳಗಾದರೆ ಕರೆಯುವ ಕೂಲಿ ಕೆಲಸ, ಇವೆಲ್ಲದರ ನಡುವೆ ಅಪ್ಪಚ್ಚಿಯಾಗುತ್ತಿರುವ ಸ್ಲಂ ಮಹಿಳೆಯರ ಮಾನಸಿಕ, ದೈಹಿಕ, ಸಾಮಾಜಿಕ ಹಿಂಸೆಗಳು ಇದುವರೆಗೂ ಏಕೆ ನಮ್ಮ ಮಹಿಳಾ ಚಳುವಳಿಗಳ ಕಣ್ಣಿಗೆ ಬಿದ್ದಿಲ್ಲ?

* * *

ಹಿಂಸಾಮುಖಿ ಜನಾಂದೋಲನಗಳು ಎಷ್ಟು ಸೂಕ್ತ? ಎಷ್ಟು ಸಾಧ್ಯ?

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಬೇರೆ ಬೇರೆ ಕಾಲದಲ್ಲಿ ಒಂದಲ್ಲ ಒಂದು ಉದ್ದೇಶ್ಯದ ಸಾಧನೆಗಾಗಿ, ಇಲ್ಲವೇ ಒಂದಲ್ಲ ಒಂದು ಸಮಸ್ಯೆಯ ಪರಿಹಾರಕ್ಕಾಗಿ ಜನಾಂದೋಲನಗಳು ನಡೆಯುತ್ತಲೇ ಬಂದಿವೆ. ಸಮಾಜವಾದಿ ಧರ್ಮ ನಿರಪೇಕ್ಷ ಗಣರಾಜ್ಯವಾದ ಸ್ವತಂತ್ರ ಭಾರತದ ಸಂವಿಧಾನವೂ ಸಹ ತನ್ನ ಸ್ವಾತಂತ್ರ್ಯದ ಹಕ್ಕುಗಳು ಎಂಬ ವಿಧಿಯ ಮೂಲಕ ಜನಾಂದೋಲನಗಳಿಗೆ ಪ್ರತ್ಯಕ್ಷವಾಗಿ ಬೆಂಬಲ ಕೊಟ್ಟಿದೆ. ಆದ್ದರಿಂದ ಜನರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಜನತಾ ಆಂದೋಲನಗಳನ್ನು ನಡೆಸಿಕೊಂಡು ಬಂದಿರುವುದು ನಮ್ಮ ಸ್ವಾತಂತ್ರ್ಯದ ಆಶೋತ್ತರಗಳಿಗೂ, ಸಂವಿಧಾನದ ಚೇತನಕ್ಕೂ ವಿರೋಧವೇನಲ್ಲ. ಅಷ್ಟೇ ಅಲ್ಲ, ಜನಾಂದೋಲನಗಳು ಭಾರತಿಯ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುತ್ತಾ ಬಂದಿವೆಯಷ್ಟೇ ಅಲ್ಲ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಹೊಸ ಬಲವನ್ನೂ ಕೊಡುತ್ತಾ ಬಂದಿವೆ. ಸ್ವಾತಂತ್ರ್ಯ ನಂತರದ ೫೩ ವರ್ಷಗಳ ಕಾಲಗತಿಯಲ್ಲಿ ಹುಟ್ಟಿದ ಜನಾಂದೋಲನಗಳ ಪಟ್ಟಿಯನ್ನು ಮಾಡಿದರೆ ಮತ್ತು ಆ ಜನಾಂದೋಲನಗಳ ಇತಿಹಾಸವನ್ನು ದಾಖಲಿದರೆ ನಮ್ಮ ದೇಶವು ಪ್ರಪಂಚದ ದೊಡ್ಡ ಮತ್ತು ಕ್ರಿಯಾಶೀಲ ಪ್ರಜಾಪ್ರಭುತ್ವ ದೇಶಗಳಲ್ಲಿ ಒಂದು ಎಂದು ಪರಿಗಣಿಸಲ್ಪಡುತ್ತದೆ.

ಯಾವ ಸಂವಿಧಾನವು ಜನಾಂದೋಲನಗಳಿಗೆ ತನ್ನ ನೈತಿಕ ಹಾಗೂ ರಾಜಕೀಯ ಬೆಂಬಲವನ್ನು ಕೊಟ್ಟಿದೆಯೋ ಅದೇ ಸಂವಿಧಾನವು ದೇಶದ ಜನತೆಯ ಮುಂದೆ ಹಲವಾರು ನಾಗರಿಕ ಕರ್ತವ್ಯಗಳನ್ನು ಸಹ ಮುಂದಿಟ್ಟಿದೆ. ಅಲ್ಲದೆ, ಶಾಂತಿ, ಶಿಸ್ತು ಇತ್ಯಾದಿಗಳ ಪಾಲನೆಗೆ ಸಂಬಂಧಿಸಿದಂತೆ ಅನೇಕ ಕಟ್ಟುಪಾಡುಗಳನ್ನು ಹಾಕಿದೆ. ಇಷ್ಟೆಲ್ಲಾ ಸಂವಿಧಾನಾತ್ಮಕ ಇತಿ-ಮಿತಿಗಳಿದ್ದರೂ ನಮ್ಮ ದೇಶದಲ್ಲಿ ಜನಾಂದೋಲನಗಳ ಜನನಕ್ಕೆ ಯಾವ 'ಕುಟುಂಬ ಯೋಜನೆ'ಯೂ ಜಾರಿಯಲ್ಲಿಲ್ಲ.

ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಮೊಟ್ಟ ಮೊದಲನೆಯ ಜನಾಂದೋಲನವೆಂದರೆ ಭಾಷಾವಾರು ಪ್ರಾಂತ್ಯ ರಚನೆಯ ಬೇಡಿಕೆ ಕುರಿತು ನಡೆದ ಆಂದೋಲನ. ಈ ಆಂದೋಲನ ದೇಶವ್ಯಾಪಿಯಾದ ಆಂದೋಲನವಾಗಿತ್ತು.

ಈ ಆಂದೋಲನವು ಪ್ರಾರಂಭದಲ್ಲಿ ಶಾಂತಿಯುತವಾದುದು ಕ್ರಮೇಣ ಹಿಂಸಾಯುಕ್ತವಾಯಿತು. ಪ್ರಧಾನಮಂತ್ರಿ ನೆಹರು ಅವರಿಗೆ ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ ಎಳ್ಳಷ್ಟೂ ಒಲವಿರಲಿಲ್ಲ. ಅವರು ಈ ಆಂದೋಲನ ದೇಶದ ಐಕ್ಯತೆಗೆ ದಕ್ಕೆಯನ್ನುಂಟು ಮಾಡುವಂತಹದು ಎಂದೇ ಭಾವಿಸಿದ್ದರು. ಆದರೆ ಭಾಷಾವಾರು ಪ್ರಾಂತ್ಯದ ಬೇಡಿಕೆ ಹಿಂಸಾಮಯವಾಗತೊಡಗಿ ದೇಶದ ಆಸ್ತಿಗೆ ನಷ್ಟ, ಸಾಮಾನ್ಯ ಜನರ ಜೀವನಕ್ಕೆ ಆಪತ್ಕಾರಿಯಾಗುತ್ತಾ ನಡೆದಾಗ ಮತ್ತು ಅಂತಿಮವಾಗಿ ಆಂಧ್ರದ ಹಿರಿಯ ಕಾಂಗ್ರೆಸ್ ನಾಯಕ ಪೊಟ್ಟಿ ಶ್ರೀರಾಮುಲು ಆಮರಣಾಂತ ಉಪವಾಸ ಮಾಡಿ ಮರಣ ಹೊಂದಿದ ನಂತರ ಉಂಟಾದ ಭೀಕರ ಗಲಭೆಗಳು ನೆಹರುರವರ ಅಭಿಪ್ರಾಯಗಳನ್ನು ಬದಲಾಯಿಸಿದವು. ದೇಶದ ವಿಭಜನೆಯ ಕಾರಣದಿಂದಾಗಿದ್ದ ಅತಿಯಾದ ಹಿಂಸಾಚಾರದ ಪ್ರಭಾವದಿಂದ ಇನ್ನೂ ಹೊರ ಬರದೇ ಇದ್ದ ನೆಹರು ಇನ್ನೊಂದು ಹಿಂಸಾಚಾರಕ್ಕೆ ಕಾರಣವಾಗುತ್ತಿದ್ದ ಭಾಷಾವಾರು ಪ್ರಾಂತ್ಯದ ಬೇಡಿಕೆಯ ಜನಾಂದೋಲನಕ್ಕೆ ಮಣಿದು ೧೯೫೦ರ ದಶಕದಲ್ಲಿ ಭಾಷಾವಾರು ರಾಜ್ಯಗಳ ರಚನೆಗೆ ನೆಹರು ಮುಂದಾದರು. ಈ ಆಂದೋಲನವು ಆ ಕಾಲಮಿತಿಗೆ ಒಳಗಾಗದೆ ಮುಂದುವರಿಯುತ್ತಾ ಹೋಗಿ ೧೯೮೦ನೇ ಇಸವಿಯವರೆಗೂ ನಡೆದುಕೊಂಡು ಬಂದಿತು. ಇದರ ಪರಿಣಾಮವಾಗಿ ಅಸ್ಸಾಂ ವಿಭಜಿತಗೊಂಡಿತು, ಬಿಹಾರ್ ವಿಭಜಿತಗೊಂಡಿತು, ಮಧ್ಯ ಪ್ರದೇಶ, ಉತ್ತರ ಪ್ರದೇಶ, ಒರಿಸ್ಸಾ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳು ವಿಭಜಿತಗೊಂಡವು. ಈಗ ದೇಶದಲ್ಲಿರುವ ಸುಮಾರು ೨೬ ಭಾಷಾವಾರು ರಾಜ್ಯಗಳನ್ನು ಒಂದು ಗಣರಾಜ್ಯದ ಚೌಕಟ್ಟಿನಲ್ಲಿ ಕೂಡಿಡುವುದು ದಿನೇ ದಿನೇ ದುಸ್ಸಾಹಸದ ಕೆಲಸವಾಗುತ್ತಿದೆ. ಈ ಒಂದು ಪ್ರಾದೇಶಿಕ ವಿಚಾರದ ಜನಾಂದೋಲನ ಹಿಂಸಾಯುಕ್ತವಾದುದರಿಂದ ಅದು ಎಷ್ಟು ಸೂಕ್ಷ್ಮವಾಗಿತ್ತು ಎಂಬುದನ್ನು ಈಗ ಪರಾಮರ್ಶಿಸುವ ಕಾಲ ಬಂದಿದೆ. ಇತ್ತೀಚೆಗೆ ಅಸ್ಸಾಂನಲ್ಲಿ ನಡೆದ ಬಿಹಾರಿಗಳ ಹತ್ಯೆ, ಅದಕ್ಕೆ ಪ್ರತಿಕ್ರಿಯೆಯಾಗಿ ಬಿಹಾರಿನಲ್ಲಿ ನಡೆದ ಅಸ್ಸಾಮಿಗಳ ಹತ್ಯೆ ಇದರಿಂದ ಭಾಷಾವಾರು ಪ್ರಾಂತ್ಯಗಳ ರಚನೆ ಎಷ್ಟು ಸೂಕ್ಷ್ಮವಾಗಿದೆ ಎಂಬುದು ಗೊತ್ತಾಗುತ್ತದೆ. ನದಿಗಳ ನೀರಿನ ಹಂಚಿಕೆಯ ವಿಷಯ, ಆಯಾ ಪ್ರಾಂತ್ಯದಲ್ಲಿರುವವರಿಗಿಂತ ಹೊರ ರಾಜ್ಯದವರಿಗೆ ದೊರೆಯುತ್ತಿರುವ ಉದ್ಯೋಗವಕಾಶಗಳ ವಿಷಯ, ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರು ಎಂಬ ಘರ್ಷಣೆಯ ವಿಷಯ ಇವೆಲ್ಲವೂ ಭಾಷಾವಾರು ಪ್ರಾಂತ್ಯ ರಚನೆಯ ಉದ್ದೇಶ ಎಷ್ಟು ಸಾಧಿತವಾಗಿದೆ ಎಂಬುದು ಗೊತ್ತಾಗುತ್ತದೆ. ಸಾಮಾನ್ಯ ಸಮಯದಲ್ಲಿ ಪ್ರತಿಯೊಂದು ರಾಜ್ಯವು ಭಾರತದ ಐಕ್ಯತೆಯ ಮಾತನ್ನು ಆಡಿದರೂ ಸಹ ಆಯಾ ರಾಜ್ಯದ ಹಿತದ ಸಮಯ ಬಂದಾಗ ರಾಜ್ಯಗಳು

ಎರಡು ವಿಭಿನ್ನ ದೇಶಗಳೇನೋ ಎಂಬಂತೆ ಕಾದಾಡುತ್ತವೆ. ಆಗ ಈ ಜನಾಂದೋಲನ ತನ್ನ ಗುರಿಯನ್ನು ಸಾಧಿಸಿತೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಇನ್ನು ೨ ನೆಯ ಪ್ರಮುಖ ಜನಾಂದೋಲನ ಭೂ ಸಮಸ್ಯೆಗೆ ಕುರಿತಾದದ್ದು. ೧೯೪೬ರಲ್ಲಿ ಆಂಧ್ರ ಪ್ರದೇಶದ ತೆಲಂಗಾಣದಲ್ಲಿ ಮತ್ತು ಶ್ರೀಲಂಕಾದಲ್ಲಿ , ಹಾಗೂ ೧೯೬೭ರಲ್ಲಿ ಪಶ್ಚಿಮ ಬಂಗಾಳದ ನಕ್ಸಲ್‌ಬಾರಿ ಹಾಗೂ ಇನ್ನಿತರ ಪ್ರದೇಶಗಳಲ್ಲಿ ಭೂಹೀನರು, ಭೂ ಮಾಲೀಕರ ಅತ್ಯಾಚಾರ, ಶೋಷಣೆ, ದಬ್ಬಾಳಿಕೆ ಇತ್ಯಾದಿ ಸಾಮಾಜಿಕ ಪೀಡೆಗಳನ್ನು ಸಹಿಸಲಾಗದೇ ಅವರೆಲ್ಲರೂ ಸಂಘಟಿತರಾಗಿ ಭೂ ಮಾಲೀಕರ ವಿರುದ್ಧ ಬಂಡೆದ್ದರು. ಅನೇಕ ಭೂಮಾಲೀಕರನ್ನು ಕೊಲೆ ಮಾಡಿದರು. ಅವರಿಂದ ಬಲತ್ಕಾರವಾಗಿ ಭೂಮಿಯನ್ನು ಕಿತ್ತುಕೊಂಡರು. ಭೂ ಹೀನರ ಈ ಹಿಂಸಾಮಯ ಹೋರಾಟಕ್ಕೆ ಭಾರತದ ಕಮುನಿಸ್ಟ್ ಪಕ್ಷದ ಎಡಪಂಥೀಯ ಗುಂಪು ಭೂಹೀನರ ಹೋರಾಟಕ್ಕೆ ಸೈದ್ಧಾಂತಿಕ ನೆಲೆಯನ್ನು ಕೊಟ್ಟು ಅವರು ಇನ್ನಷ್ಟು ಶಕ್ತಿಯುತವಾಗಿ ಸಂಘಟಿತರಾಗಿ ಭೂ ಒಡೆಯರ ವಿರುದ್ಧ ಹೋರಾಡುವಂತೆ ಪ್ರಚೋದಿಸಿತು. ಕಾಲ ಕ್ರಮೇಣ ಭೂ ಹೀನರ ಹೋರಾಟ ಚೀನಾ ದೇಶದ ಮಾದರಿಯ ಕ್ರಾಂತಿಯ ಪಥವನ್ನು ಅನುಸರಿಸುವುದಾಗಿ ಘೋಷಣೆ ಮಾಡಿತು. ಹೀಗೆ ಘೋಷಣೆ ಮಾಡುವ ವೇಳೆಗಾಗಲೇ ತೆಲಂಗಾಣದ ೨೫೦೦ ಹಳ್ಳಿಗಳಲ್ಲಿ ಕಮ್ಯುನ್‌ಗಳನ್ನು ರಚಿಸಲಾಗಿತ್ತು. ೧೦,೦೦೦ ಗ್ರಾಮ ಸೈನಿಕರನ್ನು ಸಿದ್ಧಗೊಳಿಸಲಾಗಿತ್ತು. ೨೦೦೦ ಗೆರಿಲ್ಲಾ ಹೋರಾಟಗಾರರ ಘಟಕಗಳನ್ನು ರಚಿಸಲಾಗಿತ್ತು. ಅಂದು ಚಿಕ್ಕದಾಗಿ ಪ್ರಾರಂಭವಾದ ಮಾವೋ ವಿಚಾರವಾದಿಗಳ ಈ ಹೋರಾಡ ೫೩ ವರ್ಷಗಳ ಅವಧಿಯಲ್ಲಿ ದೇಶವ್ಯಾಪಿಯಾಗಿದೆ. ಕಳೆದ ಅಕ್ಟೋಬರ್ ೧ರಂದು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ಮೇಲೆ ತಿರುಪತಿಯಲ್ಲಿ ನಡೆದ ಪ್ರಾಣಾಂತಕ ಹಲ್ಲೆಯ ಕಾರಣದಿಂದ ಈ ಜನಾಂದೋಲನದ ಗಂಭೀರ ಸ್ವರೂಪ ಬೆಳಕಿಗೆ ಬಂದಿದೆ. ದಕ್ಷಿಣದ ಆಂಧ್ರ ಪ್ರದೇಶದಿಂದ ಹಿಡಿದು ಉತ್ತರದ ನೇಪಾಳದವರೆಗೆ ಮಾವೋ ಕ್ರಾಂತಿಕಾರರು ಹರಡಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಮಧ್ಯ ಪ್ರದೇಶ, ಛತ್ತೀಸ್‌ಗಡ್, ಓರಿಸ್ಸಾ, ಜಾರ್ಖಂಡ್, ಬಿಹಾರ್ ಈ ಎಲ್ಲಾ ರಾಜ್ಯಗಳಲ್ಲಿ ನಕ್ಸಲೀಯರು ತಮ್ಮ ಬೀಡು ಬಿಟ್ಟಿದ್ದಾರೆ. ಕರ್ನಾಟಕದಲ್ಲಿಯ ಇತ್ತೀಚಿಗಿನ ಉದಾಹರಣೆ. ದಕ್ಷಿಣ ಕನ್ನಡದ ಕಾರ್ಕಳ ಬಳಿ ನಕ್ಸಲೀಯರೆಂಬ ಶಂಖೆಯಿಂದ ಇಬ್ಬರು ಯುವತಿಯರು ಪೋಲೀಸರ ಗುಂಡಿಗೆ ತುತ್ತಾಗಿದ್ದಾರೆ. ಇನ್ನೊಂದು ಉದಾಹರಣೆ ಬೆಂಗಳೂರಿನಲ್ಲಿಯ ಶಾಸಕರ ಭವನದಲ್ಲಿ ಬಾಂಬಿಟ್ಟ ಗಿರೀಶ್ ಮಟ್ಟಣ್ಣನವರದು. ನಕ್ಸಲೀಯಳೆಂದೂ ಹೇಳಿಕೊಂಡ ಯಶೋಧ ಕೊನೆಯಲ್ಲಿ ಹೇಳಿದ ಮಾತೇನೆಂದರೆ

ಕುದುರೆ ಮುಖ ಅರಣ್ಯ ಪ್ರದೇಶದಿಂದ ಉಚ್ಚಾಟಿತಗೊಂಡಿರುವ ಆದಿವಾಸಿಗಳು ಪ್ರಜಾಸತ್ತಾತ್ಮಕ ಅಥವಾ ಸಶಸ್ತ್ರ ಹೋರಾಟ ಏನೂ ಬೇಕಾದರೂ ಮಾಡಲಿ ಅದಕ್ಕೆ ನನ್ನ ವಿರೋಧವಿಲ್ಲ. ಆದರೆ ನಾನು ಮಾತ್ರ ಶಸ್ತ್ರ ಕೈಗೆತ್ತಿಕೊಂಡು ಹೋರಾಟ ನಡೆಸುವ ವಿಷಯವನ್ನು ಸಂಪೂರ್ಣವಾಗಿ ಮರೆತ್ತಿದ್ದೇನೆ.

ಇನ್ನೂ ಮಟ್ಟಣ್ಣನವರ್ ಮಾಡಿದ ಕೃತ್ಯಕ್ಕೆ ಸಂಬಂಧಿಸಿದ್ದು, ಅವರು ತಮ್ಮ ಕೃತ್ಯಕ್ಕೆ ಸಮರ್ಥನೆಯಾಗಿ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ೧೯೩೧ನೇ ಇಸವಿಯಲ್ಲಿ ಇಂಗ್ಲೀಷರ ದಬ್ಬಾಳಿಕೆಯ ವಿರುದ್ಧದ ಹೋರಾಟದ ಸಂಕೇತವಾಗಿ ಪಾರ್ಲಿಮೇಂಟ್ ಭವನದಲ್ಲಿ ಬಾಂಬ್ ಎಸೆದಿದ್ದ ಭಗತ್‌ಸಿಂಗರ ಉದಾಹರಣೆಯನ್ನು ಕೊಟ್ಟಿದ್ದಾರೆ. ಇವೆರಡೂ ಘಟನೆಗಳಲ್ಲಿ ಮಟ್ಟಣ್ಣನವರ್‌ರವರ ಕೃತ್ಯ ನೇರವಾಗಿ ಜನಾಂದೋಲನವಲ್ಲವಾದರೂ ಅವರ ಬಾಂಬ್ ಇಡುವ ಕೃತ್ಯದ ಹಿಂದೆ ಒಂದು ಜನಾಭಿಪ್ರಾಯ ರೂಪುಗೊಳ್ಳುತ್ತಿದೆ. ದೇಶದಲ್ಲಿ ಭ್ರಷ್ಟಾಚಾರ ಅತಿ ವ್ಯಾಪಕವಾಗಿ ಬೆಳೆದಿದೆ, ಆ ಭ್ರಷ್ಟಾಚಾರದಿಂದ ಜನತೆ ಬೇಸತ್ತಿದೆ ಮತ್ತು ನಿಸ್ಸಹಾಯಕವಾಗಿದೆ. ಭ್ರಷ್ಟಾಚಾರದ ಬಗ್ಗೆ ಜನತೆಯ ಮನಸ್ಸಿನಲ್ಲಿರುವ ಹಾಗೂ ಪ್ರತಿಭಟನಾ ಮನೋಭಾವದ ಸಂಕೇತವಾಗಿ ಮಟ್ಟಣ್ಣನವರ್‌ರವರ ಬಾಂಬ್ ಇಡುವ ಕ್ರಿಯೆ ಆಗಿದೆ. ಆದ್ದರಿಂದ ಅವರ ಈ ಕೃತ್ಯವನ್ನು ಸರ್ಕಾರ ಸಹಾನುಭೂತಿಯಿಂದ ನೋಡಬೇಕು ಹಾಗೂ ಅವರಿಗೆ ಅತ್ಯಂತ ಕಡಿಮೆ ಶಿಕ್ಷೆ ಆಗುವಂತೆ ಪ್ರಯತ್ನಿಸಬೇಕು. ಮತ್ತು ಸಾಧ್ಯವಾದರೆ ಅವರನ್ನು ಆರೋಪದಿಂದ ಮುಕ್ತರನ್ನಾಗಿ ಮಾಡಬೇಕು ಎಂಬಿತ್ಯಾದಿ ಜನಾಭಿಪ್ರಾಯ ಕ್ರೂಡಿಕೊಳ್ಳುತ್ತಿದೆ. ರಾಜ್ಯದ ವಕೀಲರು ಮತ್ತು ಭ್ರಷ್ಟಾಚಾರ ವಿರೋಧ ವೇದಿಕೆಯವರು ಮಟ್ಟಣ್ಣನವರ್ ರವರ ಕೃತ್ಯಕ್ಕೆ ನೈತಿಕ ಬೆಂಬಲವನ್ನು ಸಹ ಕೊಟ್ಟಿದ್ದಾರೆ. ವೇದಿಕೆಯ ಅಧ್ಯಕ್ಷರಾದ ಶ್ರೀ ಕೋ.ಚನ್ನಬಸಪ್ಪರವರು ಮಟ್ಟಣ್ಣನವರ್‌ರವರ ಪರವಾಗಿ ವಕಾಲತ್ತು ವಹಿಸಲು ಮುಂದೆ ಬಂದಿದ್ದಾರೆ. ಚನ್ನಬಸಪ್ಪನವರು ತಮ್ಮ ಈ ಬೆಂಬಲಕ್ಕೆ ಒಂದು ವ್ಯವಹಾರಿಕವಾದ ಸೂತ್ರವನ್ನು ರಚಿಸಿದ್ದಾರೆ. ಅವರ ಪ್ರಕಾರ ಭ್ರಷ್ಟಾಚಾರ ಪೆಡಂಬೂತಕ್ಕೆ ಕೊಡುವ ಕೊಡಲಿಯ ಒಂದೊಂದು ಏಟು ಸಾರ್ಥಕವೇ?

ಯಶೋದ ಮತ್ತು ಮಟ್ಟಣ್ಣನವರ್ ನಮ್ಮ ಮುಂದೆ ಎರಡು ಸಮಸ್ಯೆಗಳ ಪರಿಹಾರ ಮಾರ್ಗದ ಸಂಕೇತವಾಗಿ ನಿಂತಿದ್ದಾರೆ. ಯಶೋಧ ನಕ್ಷಲೀಯರ ಆಂದೋಲನಕ್ಕೆ ಸೇರಿಕೊಂಡು ದೇಶದ ಭೂಸಮಸ್ಯೆ ಮತ್ತು ಗಿರಿಜನ ಹಾಗೂ ಆದಿವಾಸಿಗಳ ಮಾನವ ಹಕ್ಕುಗಳ ಪುನರ್ ಸ್ಥಾಪನೆಯ ಕಾರಣಕ್ಕಾಗಿ ಕೋವಿ ಹಿಡಿದವರಾಗಿದ್ದಾರೆ. ಮಟ್ಟಣ್ಣನವರ್ ಭ್ರಷ್ಟಾಚಾರದ ವಿರುದ್ಧ ರೋಸಿ ಹೋಗಿ ಅದರ ನಿರ್ಮೂಲನದ ಅಗತ್ಯತೆಯ ತೀವ್ರತೆಯನ್ನು ದೇಶಕ್ಕೆ ಮನದಟ್ಟು ಮಾಡಲು ಬಾಂಬ್ ಹಿಡಿದವರಾಗಿದ್ದಾರೆ.

ಈಗಾಗಲೇ ಮೇಲೆ ಹೇಳಿರುವಂತೆ ಯಶೋಧ ಮತ್ತು ಮಟ್ಟಣ್ಣನವರ್ ಜನಾಂದೋಲನಗಳ ನಾಯಕರಾಗದೇ ಇದ್ದರೂ ಅವರ ಕೃತ್ಯಗಳ ಹಿಂದೆ ಗಣನೀಯ ಮತ್ತು ಸಮರ್ಥನೀಯ ಜನಾಭಿಪ್ರಾಯವಿದೆ ಎಂಬುದನ್ನು ತಳ್ಳಿ ಹಾಕಲು ಸಾಧ್ಯವಿಲ್ಲ. ಇವರಿಬ್ಬರ ಕೃತ್ಯಗಳಿಗೆ ಎಷ್ಟೇ ದೊಡ್ಡದಾದ ಹಾಗೂ ಶೌರ್ಯದ ಮುಖವಾಡ ಹಾಕಲು ಪ್ರಯತ್ನಿಸಿದರೂ ಒಂದು ಮಾತು ಮುಚ್ಚಿ ಹೋಗಲಾರದೇ ಉಳಿಯುತ್ತದೆ. ಅದೇನೆಂದರೆ ಆ ಯುವಕರಿಬ್ಬರ ಕೃತ್ಯಗಳು ಹಿಂಸಾಮುಖಿಯಾಗಿದ್ದವೆಂಬುದು. ಈಗ ನಮ್ಮ ಮುಂದೆ ಇರುವ ಪ್ರಶ್ನೆಯೇ ಇದು.ಹಿಂಸಾಮುಖಿಯಾದ ಜನಾಂದೋಲನಗಳಾಗಲೀ, ಜನಾಭಿಪ್ರಾಯಗಳಾಗಲೀ ಸೂಕ್ತವೇ ಅಥವಾ ಸಾಧ್ಯವೇ ಹಾಗೂ ಸಮರ್ಥನೀಯವೇ ಎಂಬುದು? (ಸ್ವಾತಂತ್ರ್ಯ ಬಂದ ಮೇಲೆ ಭಾರತ ಮತ್ತು ಪಾಕ್ ಮಧ್ಯೆ ನಡೆದ ಎಲ್ಲಾ ಯುದ್ಧಗಳಲ್ಲಿ ಸತ್ತ ಸೈನಿಕರ ಸಂಖ್ಯೆಗಿಂತಲೂ ಜಮ್ಮು – ಕಾಶ್ಮೀರದಲ್ಲಿ ಹಾಗೂ ಭಾರತದ ಇತರ ಸ್ಥಳಗಳಲ್ಲಿ ಭಯೋತ್ಪಾಕರ ಕೃತ್ಯಗಳಿಂದ ಸತ್ತವರ ಸಂಖ್ಯೆ ಅಧಿಕವಾಗಿದೆ. ಆದರೂ ಸಹ ಪಾಕ್-ಭಾರತದ ಮಧ್ಯದ ಸಮಸ್ಯೆ ೫೩ ವರ್ಷಗಳಾದರೂ ಬಗೆ ಹರಿಯದೇ ಉಳಿದಿದೆ.)

ನಕ್ಸಲ್ ವಾದಿಗಳೆಂದು ಹೇಳಿಕೊಳ್ಳುವ ಕ್ರಾಂತಿಕಾರರು ತಮ್ಮ ವೈಚಾರಿಕತೆಯನ್ನು ಬೆಳೆಸಿಕೊಂಡಿದ್ದಾರೆಯೇ ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಒಂದು ವೇಳೆ ಅವರಲ್ಲಿ ವೈಚಾರಿಕತೆಯ ಪ್ರಭುತ್ವವಿದ್ದಲ್ಲಿ ಅವರು ತಮ್ಮ ಈ ಹೋರಾಟದ ಉದ್ದೇಶಗಳೇನು ಮತ್ತು ಅವರು ಯಾವ ಬಗೆಯ ಸಮಾಜ ವ್ಯವಸ್ಥೆಯನ್ನು ಬಯಸುತ್ತಾರೆಂಬುದನ್ನು ಜನತೆಗೆ ಸ್ಪಷ್ಟವಾಗಿ ತಿಳಿಸಬೇಕು. ಹಾಗಿಲ್ಲದೆ ಕೇವಲ ತಾವು ಕ್ರಾಂತಿಕಾರರೆಂದು ಹೇಳಿಕೊಳ್ಳುತ್ತಾ ಕೊಲೆ, ಸುಲಿಗೆಗಳಲ್ಲಿ ತೊಡಗಿದರೆ ಮತ್ತು ವ್ಯವಸ್ಥೆಯನ್ನು ಬುಡಮೇಲು ಮಾಡಲು ಪ್ರಯತ್ನಿಸಿದರೆ ಅದಕ್ಕೆ ಸಮಾಜದ ಬೆಂಬಲ ಸಿಗಲಾರದಷ್ಟೇ ಅಲ್ಲ ಅದು ಅಕ್ಷಮ್ಯ ಅಪರಾಧವಾಗಿ ಕಾನೂನಿನ ಅನುಗುಣವಾಗಿ ಶಿಕ್ಷಾರ್ಹವಾಗುತ್ತದೆ. ಇಂದು ನಕ್ಸಲ್‌ವಾದಿಗಳು ಯಾವ ವ್ಯವಸ್ಥೆಯ ಬಗ್ಗೆ ತೀವ್ರ ಅಸಮಾಧಾನಗೊಂಡು ಆ ವ್ಯವಸ್ಥೆಯ ಬದಲಾವಣೆಗಾಗಿ ಕೋವಿಯನ್ನು ಹಿಡಿದಿದ್ದಾರೋ ಅಂತಹ ವ್ಯವಸ್ಥೆಯ ವಿರುದ್ಧ ಹೋರಾಡಿ ತಾವು ಹಿಡಿದಿರುವ ಹಿಂಸಾಮಾರ್ಗ ಸರಿಯಲ್ಲವೆಂದು ಆ ಮಾರ್ಗವನ್ನು ಬಿಟ್ಟಂತಹ ಉದಾಹರಣೆಗಳು ನಮ್ಮ ದೇಶದಲ್ಲಿವೆ. ಅಂತಹ ಉದಾಹರಣೆಗಳತ್ತ ನಕ್ಸಲೀಯರು ತಮ್ಮ ಗಮನವನ್ನು ಕೊಡಬೇಕಾದುದು ಬಹಳ ಅಗತ್ಯವಾದುದಾಗಿದೆ. ನಕ್ಸಲೀಯರ ಚಟುವಟಿಕೆಗಳನ್ನು ಜನಾಂದೋಲನವೆಂದು ಕರೆಯಲು ಸಾಧ್ಯವಿಲ್ಲ. ಇಂತಹದೇ ಒಂದು ಪ್ರಯತ್ನದಲ್ಲಿ ತೊಡಗಿ ತಮ್ಮ

ಮಾರ್ಗವನ್ನು ಬದಲಾಯಿಸಿಕೊಂಡ ಒಂದು ಪ್ರಮುಖ ಉದಾಹರಣೆ ಎಂ.ಎನ್.ರಾಯ್ ಅವರದು. ೧೯೩೦ರ ದಶಕದಲ್ಲಿ ಅವರು, ಈಗ ನಕ್ಸಲೀಯರು ಯಾವ ಪ್ರಕಾರದ ಚಟುವಟಿಕೆಗಳಲ್ಲಿ ತೊಡಗಿದ್ದಾರೋ ಮತ್ತು ಯಾವ ಅಸಂತೋಷದ ಭಾವದಿಂದ ಕೂಡಿದ್ದಾರೋ ಅಂತಹದೇ ಚಟುವಟಿಕೆಗಳಲ್ಲಿ ಮತ್ತು ಅಸಂತೋಷದ ಭಾವನೆಯಲ್ಲಿ ಇದ್ದಂತಹವರಾಗಿದ್ದರು. ಎಂ.ಎನ್.ರಾಯ್ ಅವರು ಸಹ ಕಮ್ಯುನಿಸ್ಟ ಪಕ್ಷದ ಸಿದ್ಧಾಂತದಿಂದ ಪ್ರಭಾವಿತರಾಗಿದ್ದರು. ಸ್ವತ: ಲೆನಿನ್ ಮತ್ತು ಸ್ಟ್ಯಾಲಿನ್‌ರನ್ನು ಸಹ ಭೇಟಿ ಮಾಡಿದ್ದರು. ಆದರೆ ಅವರು ಸ್ವಾತಂತ್ರ್ಯ ಆಂದೋಲನದಲ್ಲಿ ತೊಡಗದೇ ಬ್ಯಾಂಕ್ ದರೋಡೆ, ಬಾಂಬ್ ಆಸ್ಫೋಟನೆ ಇತ್ಯಾದಿ ಹಿಂಸಾಕೃತ್ಯಗಳಲ್ಲಿ ತೊಡಗಿದರು. ಜರ್ಮನಿ, ರಷ್ಯಾ, ಮೆಕ್ಸಿಕೋ ಮುಂತಾದ ದೇಶಗಳಿಗೆಲ್ಲಾ ತಮ್ಮ ಕಾರ್ಯಕ್ಕಾಗಿ ಸಹಾಯ ಪಡೆಯಲು ಹೋಗಿ ಬಂದರು. ಆದರೆ ಅವರಿಗೆ ಎಲ್ಲಿಯೂ ಸಹಾಯ ಸಿಗಲಿಲ್ಲ. ಆದರೆ ಅವರು ಆಳವಾದ ಅಧ್ಯಯನ ಮಾಡಿದರು. ತಮ್ಮ ವಿಚಾರಶೀಲತೆಯಿಂದ ಮತ್ತು ವಿದ್ವತ್ತಿನ ಕಾರಣದಿಂದ ಲೆನಿನ್ ಮತ್ತು ಸ್ಟ್ಯಾಲಿನ್‌ರಂತಹ ಕಮ್ಯುನಿಸ್ಟ್ ಮುಖಂಡರ ಮೆಚ್ಚುಗೆಯನ್ನು ಪಡೆದರು. ತಮ್ಮ ಜೀವನದ ಹಾಗೂ ವಿಚಾರದ ಅನೇಕ ಏರಿಳಿತಗಳ ಪರಿಣಾಮವಾಗಿ ಕೊನೆಗೆ ಅವರು 'ನವ ಮಾನವತಾ ವಾದ' ಎಂಬ ಮಾನವೀಯ ವಿಚಾರಗಳ ಆಧಾರಿತ ಸಿದ್ಧಾಂತವನ್ನು ಜನತೆಯ ಮುಂದೆ ಇಟ್ಟರು. ಇಂದಿಗೂ ಸಹ ನವ ಮಾನವತಾ ವಾದ ಸಿದ್ಧಾಂತ ವಿಚಾರವಂತರನ್ನು ಆಕರ್ಷಿಸುತ್ತಿದೆ. ಆ ಕುರಿತು ಅನೇಕ ಗ್ರಂಥಗಳು ಹೊರಬರುತ್ತಿವೆ. ಆದ್ದರಿಂದ ಇಂದಿನ ನಕ್ಸಲ್‌ವಾದಿಗಳು ಎಂ.ಎನ್.ರಾಯ್‌ರವರ ಜೀವನ ಚರಿತ್ರೆಯನ್ನು ಮತ್ತು ನವ ಮಾನವತಾ ವಾದದ ಸಿದ್ಧಾಂತವನ್ನು ಅಧ್ಯಯನ ಮಾಡುವುದು ಅಗತ್ಯ. ನಕ್ಸಲೀಯರ ಚಟುವಟಿಕೆಗಳು ಎಲ್ಲಿಯವರೆಗೆ ಹಿಂಸಾಮಯವಾಗಿರುತ್ತವೋ ಅಲ್ಲಿಯವರೆಗೆ ಇಂದಿನ ಸಮಾಜ ವ್ಯವಸ್ಥೆಯಲ್ಲಿ ಅವುಗಳಿಗೆ ಸ್ಥಾನವಿರುವುದಿಲ್ಲ.

ಹಿಂಸೆ ಎಂದಿಗೂ ಯಾವುದೇ ಸಮಸ್ಯೆಯ ಪರಿಹಾರಕ್ಕೆ ಸಾಧನವಾಗಲಾರದೆಂಬುದು ಮಾನವ ಅನಾಗರೀಕತೆಯಿಂದ ನಾಗರೀಕತೆಯತ್ತ ಪ್ರಯಾಣ ಪ್ರಾರಂಭಿಸಿದಾಗಿನಿಂದ ಶತ:ಸಿದ್ಧವಾಗುತ್ತ ಬಂದ ವಾಸ್ತವ ಸಂಗತಿ. ಹಿಂಸೆಯ ವಿರುದ್ಧವೇ ಅಲ್ಲವೇ ಮಹಾವೀರ, ಬುದ್ಧ ಮತ್ತು ಇನ್ನಿತರ ಧರ್ಮ ಪ್ರವರ್ತಕರು ತಮ್ಮ ಧ್ವನಿ ಎತ್ತಿದ್ದು? ಕಳಿಂಗ ಘೋರ ಯುದ್ಧದ ನಂತರವಲ್ಲವೆ ಅಶೋಕ ಬೌದ್ಧ ಧರ್ಮವನ್ನು ಸ್ವೀಕರಿಸಿದ್ದು? ಎರಡು ಮಹಾಯುದ್ಧಗಳ ಭೀಕರ ಪರಿಣಾಮವಾಗಿಯೇ ಅಲ್ಲವೇ ವಿಶ್ವ ರಾಷ್ಟ್ರ ಸಂಸ್ಥೆ ಜನಿಸಿದ್ದು? ಸಮಾಜದ ಹಾಗೂ ದೇಶದ ವ್ಯವಹಾರಗಳು ಸುಗುಮವಾಗಿ ಸಾಗಲೆಂದಲ್ಲವೆ ಸರ್ಕಾರ, ಸಂವಿಧಾನ, ನ್ಯಾಯಾಂಗ, ಪ್ರಜಾಪ್ರಭುತ್ವ, ಶಾಲಾ-ಕಾಲೇಜುಗಳು,

ವಿಶ್ವವಿದ್ಯಾನಿಲಯಗಳು ಮುಂತಾದ ನಾಗರೀಕ ಸಂಸ್ಥೆಗಳ ಸ್ಥಾಪನೆಯಾದುದು?

ಯಶೋಧ ಮತ್ತು ಮಟ್ಟಣ್ಣನವರ್ ಯಾವ ಸಮಸ್ಯೆಗಳ ಪರಿಹಾರಕ್ಕೆ ಸಂಕೇತವಾಗಿದ್ದರೋ ಆ ಸಮಸ್ಯೆಗಳ ಪರಿಹಾರಕ್ಕಾಗಿ ನಮ್ಮ ದೇಶದಲ್ಲಿ ಎರಡು ದೊಡ್ಡ ಜನಾಂದೋಲನಗಳೇ ನಡೆದವು ಎಂಬುದನ್ನು ನಮ್ಮ ಜನ ಬಹಳ ಸುಲಭವಾಗಿ ಮರೆತಿರುವುದೇ ಯಶೋಧ ಮತ್ತು ಮಟ್ಟಣ್ಣನವರ್‌ರಂತಹ ಯುವಕರು ದಾರಿ ತಪ್ಪಲು ಕಾರಣವಾಗಿರುವುದು.

ಆ ಎರಡು ಜನಾಂದೋಲನಗಳಲ್ಲಿ ಅದ್ವಿತೀಯವಾದುದು ಸ್ವಾತಂತ್ರ್ಯ ಆಂದೋಲನ. ನಮ್ಮ ಸ್ವಾತಂತ್ರ್ಯ ಆಂದೋಲನ ಕೇವಲ ರಾಜಕೀಯ ಸ್ವಾತಂತ್ರ್ಯ ಆಂದೋಲನವಾಗಿರಲಿಲ್ಲ. ಸ್ವಾತಂತ್ರ್ಯ ಆಂದೋಲನದ ಹಿಂದೆ ಒಂದು ಹೊಸ ಸಮಾಜದ ನಿರ್ಮಾಣದ ಉದ್ದೇಶವೂ ಇತ್ತು. ಆ ಹೊಸ ಸಮಾಜದಲ್ಲಿ ಯಾವುದೇ ಪ್ರಕಾರದ ತಾರತಮ್ಯ ಇರುವುದಿಲ್ಲ, ಶೋಷಣೆ ಇರುವುದಿಲ್ಲ, ಭೋಗಕ್ಕಿಂತ ತ್ಯಾಗಕ್ಕೆ ಹೆಚ್ಚು ಮಹತ್ವವಿರುವುದು. ಅದು ವಿಕೇಂದ್ರೀಕೃತ ರಾಜ್ಯ ವ್ಯವ್ಯಸ್ಥೆಯಾಗಿರುವುದರಿಂದ ಅಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವೇ ಇರುವುದಿಲ್ಲ. ಇಂತಹ ಮಹೋನ್ನತ ಉದ್ದೇಶಗಳಿರುವ ದೇಶದ ಸ್ಥಾಪನೆಗಾಗಿ ಅಗತ್ಯವಾಗಿದ್ದ ಸ್ವಾತಂತ್ರ್ಯ ಪಡೆಯಲು ಹಿಂಸೆಯ ಅತಿಯಾದ ಅಗತ್ಯವಿದ್ದರೂ ನಮ್ಮ ದೇಶ ಅಹಿಂಸಾ ಮಾರ್ಗವನ್ನೇ ಅನುಸರಿಸಿತು. ತನ್ಮೂಲಕ ಸ್ವತಂತ್ರ್ಯೋತ್ತರ ಭಾರತದ ಜನಜೀವನದಲ್ಲೂ ಅಹಿಂಸಾ ಜೀವನಕ್ರಮವೇ ಪ್ರಭುದ್ಧವಾಗಿರಲೆಂದು ಬಯಸಲಾಗಿತ್ತು. ಸರ್ವಾಧಿಕಾರಿಯಾಗುವಂತಹ ಅವಕಾಶಗಳಿದ್ದರೂ ನಮ್ಮ ದೇಶದ ನಾಯಕರು ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಅಂಗೀಕರಿಸಿದರು. ಆ ಹೋರಾಟದ ಸಮಯದಲ್ಲಿ ಮಟ್ಟಣ್ಣನವರ್ ಮತ್ತು ಯಶೋಧಳಂತಹ ಕ್ರಾಂತಿಕಾರಿ ಯುವಕರ ಸಂಖ್ಯೆಯೇನೂ ಕಡಿಮೆ ಇರಲಿಲ್ಲ. ಜವಹರ್‌ಲಾಲ್ ನೆಹರುರಂತಹ ವಿಚಾರವಂತ ವ್ಯಕ್ತಿಯೂ ಸಹ ಕ್ರಾಂತಿಯ ಮಾತನಾಡುತ್ತಿದ್ದಂತಹ ಕಾಲವದು ಆದರೂ ಕೂಡ ಅಂತಹ ಸಂಧರ್ಭದಲ್ಲೆಲ್ಲಾ ಬಂದ ನಿರ್ಣಾಯಕ ವಿಷಯ ಸಾಧನ ಶುದ್ಧಿಯ ಮಾತು. ಸಾಧ್ಯ ಅಂದರೆ ಮಾರ್ಗ ಅಶುದ್ಧವಾಗಿದ್ದರೆ ಗುರಿಯನ್ನು ತಲುಪಲು ಸಾಧ್ಯವಿಲ್ಲವೆಂಬ ಮಾತು. ಬೇವಿನ ಬೀಜ ಬಿತ್ತಿ ಮಾವಿನಹಣ್ಣನ್ನು ಹೇಗೆ ಪಡೆಯಲಾಗದೋ ಹಾಗೆಯೇ ಉತ್ತಮ ಉದ್ದೇಶವನ್ನು ಕೀಳು ಮಾರ್ಗದಿಂದ ಪಡೆಯಲಾಗದು ಎಂಬ ಮಾತು. ಜೀವನದ ಈ ಪ್ರಾಥಮಿಕ ವಿಷಯದ ಭೋದನೆಗಾಗಿಯೇ ಸುಮಾರು ೩೨ ವರ್ಷಗಳಷ್ಟು ದೀರ್ಘಕಾಲ ಸ್ವಾತಂತ್ರ್ಯ ಚಳುವಳಿಯನ್ನು ನಡೆಸಲಾಯಿತು. ೩೨ ವರ್ಷಗಳ ಕಾಲ ನಡೆದ ಈ ಪಾಠ ದೇಶಕ್ಕೆ ಸ್ವಾತಂತ್ರ್ಯ ಬಂದ ೩೨ ನಿಮಿಷಗಳಲ್ಲಿ ಮಂಗಮಾಯವಾಯಿತು. ಇದಕ್ಕೆ ಯಾರು ಹೊಣೆ? ದೇಶಕ್ಕೆ ಸ್ವಾತಂತ್ರ್ಯ

ತಂದು ಕೊಟ್ಟ ನಾಯಕರೇ ಅಥವಾ ಈ ದೇಶದ ನಿವಾಸಿಗಳೇ?

ಎರಡನೆಯ ಪ್ರಮುಖ ಜನಾಂದೋಲನ ಆಚಾರ್ಯ ವಿನೋಬಾ ಭಾವೆಯವರ ನೇತೃತ್ವದಲ್ಲಿ ನಡೆದ ಭೂದಾನ ಆಂದೋಲನ, ಈ ಆಂದೋಲನವು ತೀವ್ರತಮವಾದ ಭೂ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನತ್ತ ನಡೆದ ಜನಾಂದೋಲನ. ಈ ಆಂದೋಲನ ಇಡೀ ದೇಶದ ಉದ್ದಗಲಕ್ಕೂ ನಡೆಯಿತು. ಸಾವಿರಾರೋಪಾದಿ ಸಂಖ್ಯೆಯಲ್ಲಿ ಕಾರ್ಯಕರ್ತರೂ, ಜನಸಾಮಾನ್ಯರೂ ಭಾಗವಹಿಸಿದಂಥ ಆಂದೋಲನ.

ಈ ಆಂದೋಲನ ಭೂ ಸಮಸ್ಯೆಯಂತಹ ಗಂಭೀರತಮವಾದ ಸಮಸ್ಯೆಯ ಪರಿಹಾರಕ್ಕೆ ಅಹಿಂಸಾತ್ಮಕವಾಗಿ ನಡೆದ ಆಂದೋಲನವಾಗಿತ್ತೆಂದು ನಾವೆಲ್ಲರೂ ಗಮನಿಸಬೇಕಾಗಿದೆ. ಬೇಸಾಯಮಾಡಬಲ್ಲ, ಮಾಡಬಯಸಿದರೂ ಇತರರ ಹೊಲದಲ್ಲಿ ಕೂಲಿಯಲ್ಲದೆ ಬೇರೇನೋ ಮಾಡಲು ಅವಕಾಶವಿಲ್ಲದ ಭೂಹೀನ ದರಿದ್ರನಿಗೆ ಸಲ್ಲಬೇಕಾದುದು ಭೂದಾನ. ಭೂಮಿಯ ಮೇಲೆ ವೈಯುಕ್ತಿಕ ಒಡೆತನವನ್ನು ಹೋಗಲಾಡಿಸುವುದು ಅಷ್ಟೇ ಅಲ್ಲ ಒಡೆತನದ ಪ್ರವೃತ್ತಿಯನ್ನು ಅಳಿಸಿ ಹಾಕಲು ಹೊರಟಿದ್ದಂತಹ ಆಂದೋಲನ ವಿನೋಬಾರ ಭೂದಾನ ಆಂದೋಲನ ಗಾಳಿ, ನೀರು, ಬೆಳಕು ಇವುಗಳಂತೆ ಭೂಮಿಗೂ ಒಬ್ಬನೇ ಒಡೆಯ ಆ ಭಗವಂತ. ಎಲ್ಲರಿಗೂ ಕೈಯಾರೆ ಹೊಲ ಮಾಡಲು ಸಮಾನ ಹಕ್ಕು ಇದೆ ಎಂಬ ವಿಚಾರವನ್ನು ಪ್ರಚಾರಮಾಡಲು ಈ ಆಂದೋಲನ ಪ್ರಯತ್ನಿಸಿತು. ಭೂಮಿಯನ್ನು ರಾಷ್ಟ್ರೀಕರಣಗೊಳಿಸುವ ಬದಲು ಗ್ರಾಮೀಕರಣಗೊಳಿಸಿ ಗ್ರಾಮೋದ್ಯೋಗಗಳನ್ನು ಪ್ರಾರಂಭಿಸಿ ಅಹಿಂಸಕಸಮಾಜವನ್ನು ರಚಿಸುವುದು ಭೂದಾನ ಯಜ್ಞದ ಉದ್ದೇಶವಾಗಿತ್ತು. ಆದರೆ ಹೊಸ ಸಮಾಜವನ್ನು ಕಟ್ಟಬೇಕೆಂದು ಬಯಸುತ್ತಿದ್ದ ಯಾವ ರಾಜಕೀಯ ಪಕ್ಷಗಳಾಗಲೀ ಈ ಆಂದೋಲನವನ್ನು ಬಲಿಷ್ಠಗೊಳಿಸಲು ಪ್ರಯತ್ನಿಸಲೇ ಇಲ್ಲ. ಆದರೂ ಸಹ ಸಂತ ವಿನೋಬಾ ಸುಮಾರು ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಮೈಲಿ ಪಾದಯಾತ್ರೆ ಮಾಡಿ ಸುಮಾರು ೪೦ ಲಕ್ಷ ಎಕರೆ ಭೂಮಿಯನ್ನು ದಾನವಾಗಿ ಪಡೆದು ಭೂಹೀನರಿಗೆ ಹಂಚಿದರು. ಇದಕ್ಕಿಂತಲೂ ದೊಡ್ಡದಾದ ಅಹಿಂಸಕ ಕ್ರಾಂತಿಯ ಉದಾಹರಣೆ ನಮ್ಮ ಯುವಕರಿಗೆ ಬೇಕೇ?

ಹೀಗೆ ನಮ್ಮ ಮುಂದೆ ಅಹಿಂಸಾತ್ಮಕವಾದ ಸ್ವತಂತ್ರ್ಯ ಆಂದೋಲನ, ಅಹಿಂಸಾತ್ಮಕವಾದ ಭೂ ಸಮಸ್ಯೆ ಪರಿಹಾರದ ಆಂದೋಲನ ನಮ್ಮ ಮುಂದೆ ಇರುವಾಗ ಮತ್ತು ಈ ಆಂದೋಲನಗಳಲ್ಲಿ ಇಂದು ನಮ್ಮ ದೇಶವನ್ನು ಕಾಡುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಪರಿಹಾರದ ದಾರಿ ಇರುವಾಗ,ಇಂದು ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ಹುಟ್ಟುತ್ತಿರುವ ಜನಾಂದೋಲನಗಳು

ಹಿಂಸಾಮುಖಿಯಾಗಿ ನಡೆಯುವುದಕ್ಕೆ ಯಾವ ಕಾರಣವೂ ಇಲ್ಲ.

ಇಂದು ನಮ್ಮ ದೇಶದಲ್ಲಿರುವ ಇನ್ನೆರಡು ಜನಾಂದೋಲನಗಳೆಂದರೆ ಭ್ರಷ್ಟಾಚಾರ ನಿರ್ಮೂಲನಾ ಆಂದೋಲನ ಮತ್ತು ದತ್ತ ಪೀಠದ ರಕ್ಷಣೆಯ ಆಂದೋಲನ.

ಭ್ರಷ್ಟಾಚಾರ ನಿರ್ಮೂಲನಾ ಆಂದೋಲನದ ಬಗ್ಗೆ ಹೇಳುವುದಾದರೆ ಇಂದು ಭ್ರಷ್ಟಾಚಾರವು ಸಮಾಜದ ನರನಾಡಿಗಳಲ್ಲಿ ಸೇರಿಕೊಂಡಿದೆ. ಇದನ್ನು ನಿರ್ಮೂಲನ ಮಾಡುವುದು ಬಹಳ ಕಷ್ಟ ಸಾಧ್ಯ. ಭ್ರಷ್ಟಾಚರದ ನಿರ್ಮೂಲನೆ ಹಿಂಸೆಯಿಂದ ಆಗಲು ಸಾಧ್ಯವಿಲ್ಲ. ಬದಲಿಗೆ ಭ್ರಷ್ಟಾಚಾರದ ಹುಟ್ಟಿಗೆ ಕಾರಣವಾಗುವ ಸನ್ನಿವೇಶಗಳನ್ನು ಬದಲಾಯಿಸುವ ಪ್ರಯತ್ನ ಮಾಡಬೇಕು. ಈಗ ನಮಗೆ ತಿಳಿದಿರುವಂತೆ ಭ್ರಷ್ಟಾಚಾರಕ್ಕೆ ಮುಖ್ಯ ಕಾರಣ ನಮ್ಮ ದೇಶದ ರಾಜಕಾರಣ ಮತ್ತು ಆ ಕ್ಷೇತ್ರದಲ್ಲಿ ನಡೆಯುವ ಚುನಾವಣೆಗಳು ಈ ಕುರಿತು ಚುನಾವಣಾ ಆಯೋಗ ಆಲೋಚನೆ ಮಾಡಿ ಸೂಕ್ತ ಪರಿಹಾರದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇದರ ಜೊತೆಗೆ ಜನರಲ್ಲಿ ಭ್ರಷ್ಠಾಚಾರದ ವಿರುದ್ಧ ಜನಜಾಗೃತಿ ಮೂಡಿಸಬೇಕು. ಇದಕ್ಕೆ ಉದಾಹರಣೆಯಾಗಿ ಮಹಾರಾಷ್ಟ್ರದ ಅಣ್ಣಾ ಹಜಾರೆ ನಮಗೆ ಉದಾಹರಣೆಯಾಗುತ್ತಾರೆ. ಅವರ ಕಾರ್ಯ ಪದ್ಧತಿಯಲ್ಲಿ ಕೆಲವು ಲೋಪ ದೋಷಗಳಿರಬಹುದು, ಅವುಗಳನ್ನು ನಿವಾರಿಸಿ ಇನ್ನೂ ಉತ್ತಮ ಮಟ್ಟದಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಆಂದೋಲನವನ್ನು ತೀವ್ರಗೊಳಿಸಬೇಕು.

ಇನ್ನೂ ದತ್ತ ಪೀಠಕ್ಕೆ ಸಂಬಂಧಿಸಿದ ಆಂದೋಲನದ ಬಗ್ಗೆ ಹೇಳುವುದಾದರೆ ಇದು ಜನಾಂದೋಲನವೇ ಅಲ್ಲ. ಇದು ಕೋಮು ಆಧಾರಿತ ಘರ್ಷಣೆ ಅಷ್ಟೇ. ೧೯೪೭ರ ಜನವರಿ ತಿಂಗಳಲ್ಲಿ ಹಿಂದೂ-ಮುಸ್ಲೀಮ್ ಹತ್ಯಕಾಂಡ ನಡೆದ ಸಂದರ್ಭದಲ್ಲಿ ಗಾಂಧೀಜಿಯವರು ಅಮರಣಾಂತ ಉಪವಾಸ ಮಾಡಿದ್ದರು. ಹಿಂದೂ-ಮುಸ್ಲೀಮ್‌ರಲ್ಲಿ ಐಕ್ಯತೆಯ ಭಾವನೆಯನ್ನು ಮೂಡಿಸಲು ಪ್ರಯತ್ನ ಪಟ್ಟರು. ಆಗ ಗಾಂಧೀಜಿಯವರ ಉಪವಾಸದ ಹಿಂದಿರುವ ಉದ್ದೇಶದಿಂದ ಪ್ರಭಾವಿತರಾದ ಹಿಂದೂ ಮತ್ತು ಮುಸ್ಲೀಮ್ ನಾಯಕರು ಜನವರಿ ೧೮ರಂದು, ಆಗ ಕಾಂಗ್ರೆಸ್ಸ್ ಅಧ್ಯಕ್ಷರಾಗಿದ್ದ ಡಾ:ರಾಜೇಂದ್ರ ಪ್ರಸಾದ್‌ರವರ ಮನೆಯಲ್ಲಿ ಸಭೆ ಸೇರಿ ಎರಡೂ ಕೋಮುಗಳ ಮಧ್ಯೆ ಐಕ್ಯತೆಯನ್ನು ಕಾಪಾಡಿಕೊಂಡು ಬರುವುದಾಗಿ ಪ್ರತಿಜ್ಞೆ ಮಾಡಿ ಅದನ್ನು ಲಿಖಿತದ ಮೂಲಕ ಗಾಂಧೀಜಿಯವರಿಗೆ ಕೊಟ್ಟರು. ಈ ಸಭೆಯಲ್ಲಿ ಆರ್.ಎಸ್.ಎಸ್. ನಾಯಕರೂ, ಹಿಂದೂ ಮಹಾಸಭಾದ ನಾಯಕರು, ಮುಸ್ಲಿಂ ನಾಯಕರು, ಕ್ರಿಶ್ಚಿಯನ್ ಹಾಗೂ ಸಿಖ್ ನಾಯಕರೂ ಹಾಜರಿದ್ದರು. ಇದಕ್ಕೆ ಸಾಕ್ಷಿಯಾಗಿ ಅಂದಿನ ಪಾಕಿಸ್ತಾನದ ಹೈಕಮಿಷನರ್, ರಾಜೇಂದ್ರ ಪ್ರಸಾದ್, ಜವಹರ್‌ಲಾಲ್ ನೆಹರು ಮತ್ತು ಮೌಲಾನ

ಅಜಾದ್ ಇದ್ದರು. ಈಗ ಗಾಂಧೀ ನಮ್ಮ ಮಧ್ಯೆ ಇರದೇ ಇರಬಹುದು ಆದರೆ ದತ್ತ ಪೀಠದ ವಿಷಯದಲ್ಲಿ, ೧೯೪೭ರಲ್ಲಿದ್ದ ಸಮಸ್ಯೆಯೇ ಒದಗಿಕೊಂಡಿದೆ. ಆದ್ದರಿಂದ ಜನವರಿ ೧೮, ೧೯೪೭ರಲ್ಲಿ ರಾಷ್ಟ್ರಪಿತ ಗಾಂಧೀಜಿಗೆ ಬರೆದುಕೊಟ್ಟಿದ್ದ ಪ್ರತಿಜ್ಞೆಯನ್ನು ಇಂದಿನ ಹಿಂದೂ ಮತ್ತು ಮುಸ್ಲಿಂ ನಾಯಕರು ಜ್ಞಾಪಿಸಿಕೊಳ್ಳಬೇಕು. ಆ ಪ್ರತಿಜ್ಞೆಯಲ್ಲಿ ಹೇಳಿದ್ದ ರೀತಿಯಲ್ಲಿ ದತ್ತ ಪೀಠದ ಪ್ರಶ್ನೆಯನ್ನು ಅಹಿಂಸಾತ್ಮಕವಾಗಿ ಪರಿಹರಿಸಿ ಎರಡೂ ಕೋಮುಗಳ ಮಧ್ಯೆ ಐಕ್ಯಮತ್ಯವನ್ನು ಸ್ಥಾಪಿಸಬೇಕು.

ಹೀಗೆ ನಮ್ಮ ದೇಶದಲ್ಲಿ ನೂರಾರು ಪ್ರಕಾರದ ಸಮಸ್ಯೆಗಳಿವೆ. ಆ ಎಲ್ಲಾ ಸಮಸ್ಯೆಗಳ ನಿವಾರಣೆಗಾಗಿ ಹೂಡಲ್ಪಡುವ ಎಲ್ಲಾ ಜನಾಂದೋಲನಗಳು ಹಿಂಸಾಯುಕ್ತವಾದರೆ ನಮ್ಮ ದೇಶದ ಸಾಮಾಜಿಕ ಸ್ಥಿತಿ ಎಂತಹ ಅವನತಿಗಿಳಿಯುತ್ತಿತ್ತೆಂಬುದನ್ನು ಊಹಿಸಲು ಅಸಾಧ್ಯ. ಆದ್ದರಿಂದ ನಮ್ಮ ಜನಾಂದೋಲನಗಳು ಹಿಂಸಾಮುಖಿಯಾಗಿರುವುದು ಸೂಕ್ತವೂ ಅಲ್ಲ ಮತ್ತು ಸಾಧ್ಯವೂ ಅಲ್ಲ.

ನಮ್ಮ ಕರ್ನಾಟಕಕ್ಕೆ ಸಂಬಂಧಿಸಿದಂತೆ ಎರಡು ಪ್ರಮುಖ ಜನಾಂದೋಲನಗಳಿವೆ. ಅವುಗಳಲ್ಲಿ ಒಂದು ರೈತ ಚಳುವಳಿ, ಇನ್ನೊಂದು ದಲಿತ ಸಂಘರ್ಷಚಳುವಳಿ.

ರೈತರ ಚಳುವಳಿ ಅಹಿಂಸಾತ್ಮಕ ಚಳುವಳಿಯಾಗಿ ನಡೆದುಬಂದಿದ್ದರೂ ಈಗ ರೈತ ಚಳುವಳಿ ಹೊಸ ತಿರುವನ್ನು ಪಡೆದಿದೆ. ಆ ಚಳುವಳಿ ಭಾರತದ ಗ್ರಾಮೀಣ ಜೀವನವನ್ನು ಸಂಪೂರ್ಣವಾಗಿ ಮಾರ್ಪಡಿಸಿ ಹೊಸ ರೀತಿಯ ಗ್ರಾಮ ಜೀವನಕ್ಕೆ ದಾರಿ ಮಾಡಿಕೊಡುತ್ತದೆಂದು ನಿರೀಕ್ಷಿಸಲಾಗಿತ್ತು. ಎಂದೂ ಸಂಘಟಿತರಾಗದಿದ್ದ ರೈತರು ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಸಂಘಟಿತರಾದರು. ಅದರ ಕಾರಣದಿಂದಾಗಿ ಕರ್ನಾಟಕದ ಗ್ರಾಮಗಳಲ್ಲಿ ಹೊಸ ಚೈತನ್ಯದ ಗಾಳಿ ಬೀಸಲಾರಂಭಿಸಿತು. ಆದರೆ ಅಷ್ಟರಲ್ಲಿ ರೈತ ಸಂಘದ ನಾಯಕರು ರಾಜಕಾರಣವೆಂಬ ಮೋಹಿನಿಯ ಪಾಶಕ್ಕೆ ಒಳಗಾದರು. ಆದರಿಂದ ರೈತ ಚಳುವಳಿಯಲ್ಲಿ ಪ್ರಧಾನವಾಗಿದ್ದ ರೈತ ಶಕ್ತಿಯು ಕ್ರಮೇಣ ರಾಜಕಾರಣದ ಆಮಿಷಗಳ ಕೇಂದ್ರವಾಯಿತು. ಸಂಘಟನೆ ಇಬ್ಭಾಗವಾಗಿತನ್ನ ಮೂಲ ಧ್ಯೇಯಯೋದ್ದೇಶ್ಯಗಳಿಂದ ದೂರವಾಯಿತು. ಯಾವುದೇ ಜನಾಂದೋಲನವು ಯಶಸ್ವಿಯಾಗಬೇಕಾದರೆ ಅದು ಹಿಂಸೆಯಿಂದ ದೂರವಿರಬೇಕಾಗುವುದು ಎಷ್ಟು ಮುಖ್ಯವೋ ಅಷ್ಟೆ ಮುಖ್ಯ ರಾಜ್ಯ ಶಕ್ತಿಯ ಕೇಂದ್ರದಿಂದ ದೂರವಿರುವುದು. ೈ ರೈತ ಸಂಘಟನೆ ಇಂದು ಸಿಕ್ಕಿಹಾಕಿ ಕೊಂಡಿರುವ ತನ್ನ ಗೊಂದಲಗಳ

೩೨ ನೇ ಪುಟಕ್ಕೆ

ಅರಣ್ಯ ನಾಶವಾದರೆ ಭವಿಷ್ಯ ಆಗುವುದು ಶೂನ್ಯ

ಮಾನವ ಮತ್ತು ಮರಗಿಡಗಳ ಸಂಬಂಧ ಮನುಜ ಕುಲದಷ್ಟೇ ಪುರಾತನವಾದುದು. ಮನುಷ್ಯರ ಜೀವನಕ್ಕೆ ಸಸ್ಯರಾಶಿಯಷ್ಟು ಉಪಯುಕ್ತವಾದ ನಿಸರ್ಗದ ಸಂಪತ್ತು ಬೇರೊಂದಿಲ್ಲ. ಸಸ್ಯ ಸಂಪತ್ತು ಉಸಿರಾಟಕ್ಕೆ ಸ್ವಚ್ಛಗಾಳಿ, ವಾಯುಮಂಡಲಕ್ಕೆ ತೇವಾಂಶ ಒದಗಿಸಿ, ಮಳೆಗೆ ಕಾರಣವಾಗಿದೆ. ನದಿಗಳ ಉಗಮಕ್ಕೆ ನಾಂದಿಯಾಗಿದೆ. ಮನೆ ನಿರ್ಮಾಣ, ಕೈಗಾರಿಕೆ, ಕರಕುಶಲ ಕೆಲಸ, ವ್ಯವಸಾಯ ಚಟುವಟಿಕೆಗಳಿಗೆ ಸಾಧನವಾಗಿದೆ. ಸಸ್ಯಗಳು ನಮ್ಮ ಜೀವನಕ್ಕೆ ಅವಶ್ಯವಾದ ಸೌದೆ , ಆಹಾರ, ದನಕರುಗಳಿಗೆ ಮೇವು ನೀಡುತ್ತವೆ. ವಾತಾವರಣದ ನೈರ್ಮಲ್ಯ ಕಾಪಾಡಿ, ಹವಾನಿಯಂತ್ರಣ ಮಾಡಿ, ಮಣ್ಣಿನ ಸವಕಳಿ ತಡೆದು, ಫಲವತ್ತತೆಯನ್ನು ಹೆಚ್ಚಿಸುತ್ತವೆ, ಅಂತರ್ಜಲದ ವೃದ್ಧಿಗೆ ಸಹಕಾರಿಯಾಗಿವೆ.

ಅರಣ್ಯಗಳು ವನ್ಯ ಮೃಗಗಳಿಗೆ ಆಶ್ರಯ ನೀಡಿವೆ. ಪಕ್ಷಿಗಳಿಗೆ ಮರಗಳೇ ಆಶ್ರಯ ತಾಣಗಳು. ಕಾಡು ನಾಶವಾದರೆ ಮರಗಳನ್ನೇ ಅವಲಂಬಿಸಿರುವ ಸೂಕ್ಷ್ಮಾತಿಸೂಕ್ಷ್ಮ ಜೀವಿಗಳು, ಕ್ರಿಮಿಕೀಟಗಳು, ಪ್ರಾಣಿಗಳು ನಿರ್ನಾಮವಾಗುತ್ತವೆ. ಪರಿಸರ ಸಮತೋಲನ ತಪ್ಪುತ್ತದೆ. ಸಮಸ್ತ ಜೀವಿಗಳ ಅಳಿವು-ಉಳಿವು ವನರಾಶಿಯನ್ನು ಅವಲಂಬಿಸಿದೆ. ಆದುದರಿಂದ ಕಾಡಿದ್ದರೆ ನಾಡು ಎಂಬ ಮಾತು ಸತ್ಯ. ಅವಸಾನದ ಅಂಚಿನಲ್ಲಿ ಜಗತ್ತಿನ ಮತ್ತು ನಮ್ಮ ದೇಶದ ವನ್ಯ ಸಂಪತ್ತು ಇಂದು ಅಳಿವು-ಉಳಿವಿನ ಸಂಕ್ರಮಣ ಸ್ಥಿತಿಯಲ್ಲಿದೆ. ಹಿಮಾಲಯ ಪರ್ವತ ಶ್ರೇಣಿಯು ದೇಶದ ಜೀವನದಿಗಳ ಉಗಮಸ್ಥಾನ ಹಾಗೂ ಅಪರೂಪದ ವನ್ಯ ಸಂಪತ್ತಿನ ತಾಣ. ಹಿಮಾಲಯದಲ್ಲಿಲ್ಲದ ಅನೇಕ ಸಸ್ಯ, ಪ್ರಾಣಿ ಪ್ರಕಾರಗಳು ಪಶ್ಚಿಮ ಘಟ್ಟದಲ್ಲಿವೆ. ಇವುಗಳೆಲ್ಲ ಇಂದು ವಿನಾಶದ ಅಂಚಿನಲ್ಲಿವೆ. ಕಾಡು ಪ್ರಾಣಿಗಳು ಸಂಕಷ್ಟದಲ್ಲಿವೆ. ಇನ್ನೂರಕ್ಕೂ ಮಿಕ್ಕಿದ ವಿವಿಧ ಹಕ್ಕಿಗಳು ಇಂದು ಸಾವು ಬದುಕಿನಲ್ಲಿ ಒದ್ದಾಡುತ್ತಿವೆ.

ಪಶ್ಚಿಮಘಟ್ಟದ ಹಸಿರು ಸಂಪತ್ತಿಗೆ ಎಣೆಯಿಲ್ಲ. ಶ್ರೀಗಂಧ, ನಂದಿ, ಬೀಟೆ, ತೇಗ, ಹೊನ್ನೆ, ದೇವದಾರು, ದಿಂಡಿಗೆ, ಬೋನಿಯಂತಹ ಆರ್ಥಿಕ ಲಾಭದ ಮರಗಳಿವೆ. ಆರ್ಕಿಡ್, ಫರ್ನ್, ಶಿಲೀಂದ್ರಗಳು ಪಶ್ಚಿಮ ಘಟ್ಟಗಳ ಸೌಂದರ್ಯವನ್ನು ಹೆಚ್ಚಿಸಿವೆ. ಒಟ್ಟಿನಲ್ಲಿ ಪಶ್ಚಿಮ ಹಾಗೂ ಪೂರ್ವ ಘಟ್ಟಗಳು ಶ್ರೀಮಂತ ಜೀವಕೋಟಿ ಹೊಂದಿದ್ದು, ಸಮೃದ್ಧ ಮಳೆ, ಫಲವತ್ತಾದ ಮಣ್ಣು ಖನಿಜಗಳು, ನೈಸರ್ಗಿಕ ತಾಣಗಳು, ಕೋಟ್ಯಾಂತರ ವರ್ಷಗಳಿಂದ ಲಕ್ಷಾಂತರ

ಜೀವಿಗಳ ವಿಕಾಸದ ತೊಟ್ಟಿಲಾಗಿರುವ ಹೆಮ್ಮೆಯ ಪಶ್ಚಿಮಘಟ್ಟ ಹಲವು ಯೋಜನೆಗಳಿಗೆ ಬಲಿಯಾಗುತ್ತಿದೆ.

ಈ ಭೂಮಿಯ ಅರಣ್ಯ ಮಾನವ ಪ್ರಗತಿಗನುಗುಣವಾಗಿ ನಿತ್ಯವೂ ಕ್ಷಯಿಸುತ್ತಿದೆ. ಕಾಡ್ಗಿಚ್ಚು ಅರಣ್ಯದ ಪ್ರಥಮ ಶತ್ರು. ಕಳೆದ ಬೇಸಿಗೆಯಲ್ಲಿ ಅಪಾರ ಅರಣ್ಯ ದಹಿಸಿದೆ. ಪ್ರಗತಿ ಮತ್ತು ಸುಧಾರಣೆಯ ಹೆಸರಲ್ಲಿ ಜಲಾಶಯ ಯೋಜನೆ ಮತ್ತು ಗಣಿಗಾರಿಕೆಯಿಂದಾಗಿ ವನ್ಯ ಮತ್ತು ಪ್ರಾಣಿ ಸಂಪತ್ತು ನಾಶವಾಗುತ್ತಿದೆ. ಪ್ರಗತಿ ಮತ್ತು ಸುಧಾರಣೆಗಳ ಅರ್ಥವನ್ನೇ ಇಂದು ಬದಲಿಸ ಬೇಕಾಗಿದೆ! ಕಳೆದೆರಡು ದಶಕಗಳಿಂದ ಪಶ್ಚಿಮ ಘಟ್ಟದಲ್ಲಿ ಎಡಬಿಡದೆ ನಡೆಯುತ್ತಿರುವ ಅರಣ್ಯನಾಶ ಭಯಂಕರವಾಗಿದೆ. ಒಂದು ಅಂದಾಜಿನ ಪ್ರಕಾರ ಪಶ್ಚಿಮ ಘಟ್ಟದಲ್ಲಿ ಅರಣ್ಯನಾಶದ ಪ್ರಮಾಣ ವರ್ಷಕ್ಕೆ ೯೬ ರಿಂದ ೧೧೩ ಕಿಲೋಮಿಟರ್‌ಗಳು. ಸ್ವಾತಂತ್ರ್ಯಾನಂತರದ ಮುವತ್ತು ವರ್ಷಗಳಲ್ಲಿ ೫೯.೩ ದಶಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶವನ್ನು ನಾಶಮಾಡಿದ ಕುಖ್ಯಾತಿ ನಮ್ಮದು. ಈ ಅವಧಿಯಲ್ಲಿ ನದಿ ಕಣಿವೆ ಯೋಜನೆಗಳಿಗಾಗಿ ೪೮ ಲಕ್ಷ ಹೆಕ್ಟೇರ್, ಕೈಗಾರಿಕೆಗಳಿಗಾಗಿ ೧.೩ ಲಕ್ಷ ಹೆಕ್ಟೇರ್ ಹಾಗೂ ಇನ್ನಿತರ ಕಾರಣಗಳಿಗಾಗಿ ೧೦.೩ ಲಕ್ಷ ಹೆಕ್ಟೇರ್ ಅರಣ್ಯ ನಾಶವಾಗಿದೆ.

ರಾಷ್ಟ್ರೀಯ ಅರಣ್ಯ ನೀತಿಯ ಪ್ರಕಾರ, ರಾಷ್ಟ್ರದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ.೩೩ರಷ್ಟು ಅರಣ್ಯ ಪ್ರದೇಶವಿರಬೇಕು. ಆದರೆ ಅಂಕಿ-ಅಂಶಗಳ ಪ್ರಕಾರ, ಇದು ಕೇವಲ ಶೇ.೧೬.೪೭ರಷ್ಟಾದರೆ, ದೂರಗ್ರಾಹಿ ಅಧ್ಯಯನದ ಪ್ರಕಾರ ಇಂದು ಕೇವಲ ಶೇ. ೧೪ರಷ್ಟು ಮಾತ್ರ ವಿಶ್ವಬ್ಯಾಂಕ್ ಪ್ರಕಟಿಸಿರುವ ೨೦೦೧ನೇ ಸಾಲಿನ ವಿಶ್ವ ಅಭಿವೃದ್ಧಿ ಸೂಚಿ ಪ್ರಕಾರ, ಭಾರತದಲ್ಲಿ ೯೪೧ ಚ. ಕೀ. ಮೀ. ಗಳಷ್ಟು ಪ್ರದೇಶ ಮಾತ್ರ ಅರಣ್ಯದಿಂದ ಕೂಡಿದೆ.

ಅರಣ್ಯ ನಾಶಕ್ಕೆ ಕಾರಣಗಳು

ಜನಸಂಖ್ಯಾ ಸ್ಫೋಟ ಅರಣ್ಯ ನಾಶಕ್ಕೆ ಪ್ರಮುಖ ಕಾರಣ. ಜನರ ಸಾಮಾನ್ಯ ಅಗತ್ಯಗಳ ಪೂರೈಕೆಗಳಿಗೆ ಅರಣ್ಯ ಉತ್ಪನ್ನಗಳ ಹೆಚ್ಚು, ಹೆಚ್ಚು ಬಳಕೆ ಅನಿವಾರ್ಯ. ಇದರೊಂದಿಗೆ ಹಲವು ಯೋಜನೆಗಳು ಅರಣ್ಯಗಳನ್ನು ಸಂಪೂರ್ಣವಾಗಿ ನಿರ್ನಾಮ ಮಾಡಿವೆ. ಅರಣ್ಯ ಸಂಪತ್ತನ್ನು ಅವಲಂಬಿಸಿರುವ ಕಾಗದ, ಪ್ಲೈವುಡ್, ಪಾಲಿಫೈಬರ್, ಬೆಂಕಿ ಪೆಟ್ಟಿಗೆ ಉದ್ದಿಮೆಗಳು ಕಾಡಿನ ಮೇಲಿನ ಒತ್ತಡವನ್ನು ದಿನೇ ದಿನೇ ಹೆಚ್ಚಿಸಿವೆ. ಜಲವಿದ್ಯುತ್ ಯೋಜನೆಗಳು ಅರಣ್ಯಗಳನ್ನು ನೀರಿನಲ್ಲಿ ಮುಳುಗಿಸಿವೆ. ಕಬ್ಬಿಣ ಮತ್ತು ಮ್ಯಾಂಗನೀಸ್ ಗಣಿಗಳು ಘಟ್ಟ ಪ್ರದೇಶದ ಶತ್ರುಗಳು, ಕಾಡು ಕಡಿದು ಬೇಸಾಯ ಮಾಡುವುದು,

ಉರವಲಿಗಾಗಿ ಮತ್ತು ಮನೆ ನಿರ್ಮಿಸಲು ಮರಗಳ ಪೂರೈಕೆ, ರಸ್ತೆ, ರೈಲು ಸಂಪರ್ಕ ಏರ್ಪಡಿಸಲು ಅರಣ್ಯ ಬಲಿಯಾಗುತ್ತಿದೆ. ಒಂದೆಡೆ ಕಾಡ್ಗಿಚ್ಚಿನಿಂದ ಅರಣ್ಯ ಮತ್ತು ಅರಣ್ಯ ಜೀವಿಗಳು ದಹಿಸಿಹೋಗುತ್ತಿದ್ದರೆ, ಇನ್ನೊಂದೆಡೆ ರಸ್ತೆ ಕಾಮಗಾರಿಗಳಿಗಾಗಿ ಸಾಲು ಮರಗಳನ್ನು ಸತತವಾಗಿ ಕಡಿಯಲ್ಪಡುತ್ತಿವೆ.

ಅರಣ್ಯ ನಾಶದಿಂದ ಪ್ರಾಕೃತಿಕ ಸಮತೋಲನ ತಪ್ಪುತ್ತಿವೆ. ಸಸ್ಯ ಮತ್ತು ಜೀವಿಗಳು ಅವಸಾನದ ಅಂಚು ತಲುಪಿವೆ. ಸಕಾಲದಲ್ಲಿ ಮಳೆ ಬೀಳುತ್ತಿಲ್ಲ. ಬರಗಾಲ ಮತ್ತು ಪ್ರವಾಹವನ್ನು ಏಕಕಾಲದಲ್ಲಿ ಅನುಭವಿಸಬೇಕಾಗಿದೆ. ಘಟ್ಟಗಳಲ್ಲಿ, ಇಳಿಜಾರು ಪ್ರದೇಶಗಳಲ್ಲಿ ಗಿಡಮರಗಳಿಲ್ಲದೆ ಭೂಸವೆತ ಹೆಚ್ಚಾಗಿದೆ. ಮಣ್ಣಿನ ಫಲವತ್ತತೆ ಕಡಿಮೆಯಾಗಿ, ಕೃಷಿ ಬೆಳೆಗಳ ಇಳುವರಿ ಕಡಿಮೆಯಾಗುತ್ತಿದೆ. ಜಲಾಶಯುಗಳಲ್ಲಿ ಹೂಳು ತಂಬಿ, ನೀರಿನ ಸಂಗ್ರಹ ಸಾಮರ್ಥ ಕಡಿಮೆಯಾಗಿದೆ. ಕುಡಿಯಲು ಮತ್ತು ಬೇಸಾಯಕ್ಕೆ ನೀರು ಸಾಲದಾಗುತ್ತಿದೆ. ನೀರಿಗಾಗಿ ಜಗಳವಾಗುತ್ತಿದೆ.

ಬೀಳುವ ಮಳೆಯು ಪ್ರಮಾಣ ಪ್ರತಿ ವರ್ಷವೂ ಕಡಿಮೆಯಾಗಿ, ಅಂತರ್ಜಲದ ಪ್ರಮಾಣವೂ ಸಹ ಕಡಿಮೆಯಾಗುತ್ತಿದೆ. ಬುಡಕಟ್ಟು ಜನರ ಅರಣ್ಯದ ಉತ್ಪನ್ನಗಳನ್ನೇ ನಂಬಿ ಬದುಕಿದ್ದರು. ಇಂದು ಅರಣ್ಯವಿಲ್ಲದೇ ಅವರು ತಬ್ಬಲಿಗಳಾಗಿದ್ದಾರೆ; ದೇಶಗಳ ಹವಾಗುಣದ ಮೇಲೆ ಪ್ರತಿಕೂಲ ಪರಣಾಮವಾಗುತ್ತಿದೆ; ಮಂಗನ ಕಾಯಿಲೆಯಂತಹ ಹಲವು ರೋಗಗಳು ಕಾಡುತ್ತಿವೆ; ಉಸಿರಾಟಕ್ಕೆ ಸ್ವಚ್ಛ ಆಮ್ಲಜನಕ ಸಿಗುತ್ತಿಲ್ಲ; ಓಝೋನ್ ನಾಶ ಹೆಚ್ಚುತ್ತಿರುವ ಭೂಗೋಳದ ಉಷ್ಣಾಂಶ, ಅರಣ್ಯನಾಶ ಮತ್ತು ಕೈಗಾರಿಕೆಗಳ ಪೈಶಾಚಿಕ ಕೊಡುಗೆಗಳು.

ಅರಣ್ಯನಾಶಕ್ಕೆ ಪರಿಹಾರಗಳು

ಈ ಧರೆಯ ಅಳಿವು-ಉಳಿವು ವನಸಿರಿಯನ್ನು ಅವಲಂಬಿಸಿದೆ. ಅರಣ್ಯ ಸಂರಕ್ಷಣೆಗೆ ಹಲವಾರು ಕ್ರಮಗಳನ್ನು ಕೈಗೊಳ್ಳಬೇಕು. ಕೆಲವನ್ನು ಹಿಗೆ ಸೂಚಿಸಬಹುದು.

- ಅರಣ್ಯಗಳ ಮೇಲಿನ ಅವಲಂಬನೆ ಕಡಿಮೆಯಾಗಬೇಕು. ಬದಲೀ ಸಂಪನ್ಮೂಲಗಳ ಬಳಕೆ ವ್ಯಾಪಕವಾಗಿ ಜಾರಿಗೆ ಬರಲಿ.
- ಕೋಟಿ ಕೋಟಿ ರೂ. ಹಣ ಖರ್ಚು ಮಾಡಿ , ಕಾಡುಗಳನ್ನು ಮುಳುಗಿಸಿ ಜಲಾಶಯುಗಳನ್ನು ನಿರ್ಮಿಸಿದರೆ ಅವುಗಳಲ್ಲಿ ನೀರು ತುಂಬುತ್ತಿಲ್ಲ. ಇತ್ತ ಕಾಡೂ ಇಲ್ಲ ಅತ್ತ ನೀರೂ ಇಲ್ಲ. ಪರಿಸರಕ್ಕೆ ಹಾನಿ ತಪ್ಪಲಿಲ್ಲ.

ಯೋಜನೆಗಳ ರೀತಿ ಈ ನೀತಿ ಇಂದು ಬದಲಾಗಲಿ

- ಅಭಿವೃದ್ಧಿ ಯೋಜನೆಗಳು ಸಾಮಾಜಿಕ ನ್ಯಾಯ, ಪರಿಸರದ ಗುಣಮಟ್ಟ ಕಾಯ್ದುಕೊಂಡು ಆರ್ಥಿಕ ಅಭಿವೃದ್ಧಿ ಸಾಧಿಸಲಿ.

- ಇಂದಿನ ಬರಗಾಲಕ್ಕೆ ಕಾಡು ಮತ್ತು ಪರಿಸರ ನಾಶವೇ ಕಾರಣ. ರೋಗರಹಿತ ಸಮಾಜದ ನಿರ್ಮಾಣಕ್ಕಾಗಿ ಮರಗಿಡಗಳನ್ನು ಬೆಳೆಸಬೇಕು. ಸಾಮಾಜಿಕ ಅರಣ್ಯ ಯೋಜನೆ ಯಶಸ್ವಿಯಾಗಿ ಜಾರಿಗೊಳ್ಳಬೇಕು. ಅವು ಜನರ ಬೇಡಿಕೆಯನ್ನು ಈಡೇರಿಸುವಂತಾಗಬೇಕು.

- ವನ ಮತ್ತು ವನ್ಯಮೃಗಗಳು ಈ ಜಗತ್ತನ್ನು ಸುಂದರವಾಗಿಸಿವೆ. ಈ ನಿಸರ್ಗ ಸಿರಿಯನ್ನು ಶಾಶ್ವತವಾಗಿರಿಸಲು, ಅರಣ್ಯ ದಾಳಿ ಮತ್ತು ವನ್ಯ ಮೃಗಗಳ ಬೇಟೆ ನಿಲ್ಲಲಿ. ಖಾಲಿ ಸ್ಥಳ, ಕೆರೆ ಅಂಚು, ರಸ್ತೆ ಬದಿಗಳಲ್ಲಿ ಮರಗಿಡಗಳನ್ನು ಬೆಳೆಸಬೇಕು. ವನ ಮತ್ತು ವನ್ಯಮೃಗಗಳ ಬಗ್ಗೆ ಮಹತ್ವದ ಅರಿವು ಮೂಡಿಸುವ ಕಾರ್ಯಕ್ರಮ ಎಲ್ಲೆಡೆ ಜಾರಿಗೆ ಬರಲಿ.

- ಅರಣ್ಯಾಧಿಕಾರಿಗಳಿಗೆ ಪರಿಸರ ಬದ್ಧತೆ ಇರಬೇಕು. ಅವರಲ್ಲಿ ದ್ವಂದ್ವ ನೀತಿ ಇರಬಾರದು. ಪ್ರಾಮಾಣಿಕ ಮತ್ತು ದಕ್ಷ ಅಧಿಕಾರಿಗಳ ನೆರಳಲ್ಲಿ ವನ್ಯ ಮತ್ತು ವನ್ಯಜೀವಿಗಳು ಸುರಕ್ಷಿತವಾಗಿರಬಲ್ಲವು.

ಕಾಡು ಮತ್ತು ಅಲ್ಲಿನ ಜೀವಿಗಳ ರಕ್ಷಣೆಗೆ ಕಾನೂನು ರಚಿಸಿದರೆ ಸಾಲದು, ಅದರ ಪಾಲನೆ ಮುಖ್ಯ. ಕಾಡಿನ ಉತ್ಪನ್ನಗಳ ಅಕ್ರಮ ಸಾಗಾಣಿಕೆಗೆ ಕಡಿವಾಣ ಹಾಕಿ, ದ್ರೋಹಿಗಳನ್ನು ಉಗ್ರವಾಗಿ ಶಿಕ್ಷಿಸಬೇಕು. ಅವರನ್ನು ಶಿಕ್ಷಿಸಲು ರಾಜಕಾರಣಿಗಳಿಗೆ ರಾಜಕೀಯ ಇಚ್ಛಾಶಕ್ತಿಯಿರಬೇಕು. ಕಾಡುಗಳ್ಳರ ಸೆರೆಗೆ ಸಾರ್ವಜನಿಕರು, ಸಹಕರಿಸಬೇಕು. ನೂರಾರು ವರ್ಷಗಳಿಂದ ಬೆಳೆದು ನಿಂತಿರುವ ಅಮೂಲ್ಯ ಕಾಡುಗಳಲ್ಲಿ ಗಣಿಗಾರಿಕೆ, ಜಲಾಶಯ ನಿರ್ಮಾಣ ಶಾಶ್ವತವಾಗಿ ನಿಲ್ಲಲಿ.

ಸಾಭಾರ: ವಿಜ್ಞಾನ ಸಂಗಾತಿ.

* * *

ದಿಗ್ಬಂಧನದ ನಡುವೆ : ಕ್ಯೂಬಾ

ಈ ವರ್ಷವೂ ಕೂಡ ಕ್ಯೂಬಾ ದೇಶವು ಅಮೇರಿಕಾ ತನ್ನ ಮೇಲೆ ಹೇರಿರುವ ಆರ್ಥಿಕ ದಿಗ್ಬಂಧನವನ್ನು ತೆಗೆದು ಹಾಕಬೇಕೆಂಬ ಠರಾವು ಮಂಡನೆಯನ್ನು ವಿಶ್ವಸಂಸ್ಥೆಯಲ್ಲಿ ಮಂಡಿಸಲಿದೆ. ಈ ಬಾರಿಯೂ ಈ ಠರಾವು ತಿರಸ್ಕೃತಗೊಳ್ಳಲಿದೆ. ಈ ಕ್ರಿಯೆ ಕಳೆದ ಹನ್ನೊಂದು ವರ್ಷಗಳಿಂದ ಸತತವಾಗಿ ನಡೆಯುತ್ತಾ ಬಂದಿದೆ. ಈ ಪುಟ್ಟ ದ್ವೀಪದ ಮೇಲೆ ಅಮೇರಿಕಾ ಕಳೆದ ೪ ದಶಕಗಳಿಂದ ಹೇರಿರುವ ಆರ್ಥಿಕ ದಿಗ್ಬಂಧನವನ್ನು ಎಲ್ಲಾ ದೇಶಗಳು ಖಂಡಿಸುತ್ತಿದ್ದರೂ ಅಮೇರಿಕಾ ಯಾವುದೇ ಸಂಕೋಚವಿಲ್ಲದೆ ದಿಗ್ಬಂಧನವನ್ನು ಮುಂದುವರಿಸುತ್ತಾ ಬರುತ್ತಿದೆ. ಕಳೆದ ಸಲ ಕ್ಯೂಬಾ ವಿಶ್ವಸಂಸ್ಥೆಯಲ್ಲಿ ಠರಾವು ಮಂಡಿಸಿದಾಗ ಅದನ್ನು ವಿರೋಧಿಸಿದ್ದು ಕೇವಲ ಮೂರು ದೇಶಗಳು ಮಾತ್ರ. ಅವು ಯಾವುವೆಂದರೆ ಅಮೇರಿಕಾ, ಸದಾ ಅಮೇರಿಕಾದೊಂದಿಗಿರುವ ಇಸ್ರೇಲ್ ಮತ್ತು ಮಿಕ್ರೊನೇಸಿಯಾ ಎಂಬ ಸಾಸಿವೆ ಕಾಳಿನಷ್ಟಿರುವ ಗಣರಾಜ್ಯ.

ಆರ್ಥಿಕ ದಿಗ್ಬಂಧನವನ್ನು ಹೇರಿ ಕ್ಯೂಬನ್ನರು ಹಸಿವು ಮತ್ತು ರೋಗದಿಂದ ನರಳುವಂತೆ ಮಾಡಿರುವ ಅಮೇರಿಕಾ ಇಷ್ಟಕ್ಕೇ ನಿಲ್ಲದೆ ಈ ದೇಶವನ್ನು ಹೊಸಕಿ ಹಾಕಿ ಬಿಡಲು ಅವಕಾಶಕ್ಕಾಗಿ ಕಾಯತೊಡಗಿದೆ. ಜಗಳ ತೆಗೆಯಲು ಕಾಲುಕೆರೆದು ನಿಂತಿದೆ.

ಕಳೆದ ಮೇ ಯಲ್ಲಿ ಬುಶ್ ಸರ್ಕಾರದ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಜಾನ್ ಬೋಲ್ಟನ್, ಕ್ಯೂಬಾ ದೇಶವು ಜೈವಿಕ ಮಾರಕಾಸ್ತ್ರಗಳ ತಯಾರಿಕೆಯಲ್ಲಿ ತೊಡಗಿದೆ ಎಂಬ ಅಪಾದನೆಯನ್ನು ಮಾಡಿದ್ದಾರೆ. ಇದೇ ರೀತಿಯ ಆಪಾದನೆಯನ್ನು ಇರಾಕ್ ಮೇಲೂ ಅಮೇರಿಕ ಮಾಡುತ್ತಿದ್ದುದು ಇನ್ನೂ ಜನರ ನೆನಪಿನಿಂದ ಮಾಸಿಲ್ಲ. ಒಟ್ಟಾರೆ ಪ್ರಪಂಚದಲ್ಲಿ ಎಲ್ಲಿಯೂ ಸಮಾಜವಾದದ ವಿಚಾರ ಉಳಿಯಕೂಡದು ಎಂದು ಅಮೇರಿಕಾ ಮಾಡಿಕೊಂಡಿರುವ ತೀರ್ಮಾನಕ್ಕೆ ಅದು ಕ್ಯೂಬಾಕ್ಕೆ ಕೊಡುತ್ತಿರುವ ತೊಂದರೆಯೇ ಸಾಕ್ಷಿಯಾಗಿದೆ.

ಅಮೇರಿಕಾ ಸರ್ಕಾರ ಈ ವರ್ಷ ತನ್ನ ಯು.ಎಸ್. ಏಡ್ ಸಂಸ್ಥೆಯ ಮೂಲಕ ೧.೬ ಮಿ. ಡಾಲರ್ ಖರ್ಚುಮಾಡಿ ಕ್ಯೂಬಾದಲ್ಲಿ ಒಂದು ಸ್ವತಂತ್ರ ಸರ್ಕಾರೇತರ ಸಂಸ್ಥೆಯನ್ನು ಹುಟ್ಟಿಹಾಕಲಿದೆ ಇದರ ಮೂಲಕ ೨.೧ ಮಿ ಡಾಲರ್ ಖರ್ಚು ಮಾಡಿ ಕ್ಯೂಬಾದಲ್ಲಿ ರಾಜಕೀಯ ಬದಲಾವಣೆಗೆ ಸಂಚು ನಡೆಸಿದೆ. ಕಳೆದ ೫ ವರ್ಷಗಳಲ್ಲಿ ಯು.ಎಸ್. ಏಡ್ ಮೂಲಕ ಅಮೇರಿಕಾ ಸುಮಾರು ೨೨ ಮಿ ಡಾಲರ್‌ಗಳನ್ನು ಕ್ಯೂಬಾ ದೇಶದಲ್ಲಿರುವ ಸಮಾಜವಾದಿ ಸರ್ಕಾರವನ್ನು ಅಭದ್ರಗೊಳಿಸಲು ವ್ಯಯಮಾಡಿದೆ.

ಫಿಡೆರಲ್ ಕ್ಯಾಸ್ಟ್ರೋ ಅವರ ಸಮಾಜವಾದಿ ಸರ್ಕಾರವನ್ನು ಅಸ್ಥಿರಗೊಳಿಸಲು ಅಮೇರಿಕಾ ಸರ್ಕಾರ ನಡೆಸುತ್ತಿರುವ ಹುನ್ನಾರ ಮತ್ತು ಅದು ಹುಟ್ಟು ಹಾಕುತ್ತಿರುವ ಭಯೋತ್ಪಾದನೆ ಇಂದು ನಿನ್ನೆಯದಲ್ಲ. ಅದು ೧೯೬೧ ರಷ್ಟು ಹಿಂದಕ್ಕೆ ಹೋಗುತ್ತದೆ.

ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಯೋತ್ಪಾದನೆಯ ವಿರುದ್ಧ ಆಗಿರುವ ೧೨ ಒಪ್ಪಂದಗಳಿಗೂ ಕ್ಯೂಬಾ ದೇಶ ಚಕಾರ ಎತ್ತದೆ ಸಹಿ ಮಾಡಿದೆ. ಆದರೂ ಸಹ ಅಮೇರಿಕಾ ಮತ್ತೆ ಈ ವರ್ಷ ಅಂತರರಾಷ್ಟ್ರೀಯ ಭಯೋತ್ಪಾದನೆಯಲ್ಲಿ ತೊಡಗಿರುವ ದೇಶಗಳ ಪಟ್ಟಿಗೆ ಕ್ಯೂಬಾವನ್ನು ಸೇರಿಸಿದೆ. ಕ್ಯೂಬಾದೊಂದಿಗಿನ ಸಂಬಂಧ ಸಾಮಾನ್ಯಗೊಳ್ಳಬೇಕೆಂಬ ಸಾರ್ವಜನಿಕ ಅಭಿಪ್ರಾಯ ಅಮೇರಿಕಾದಲ್ಲಿ ಇದ್ದೂ ಕೂಡ ಬುಶ್ ಸರ್ಕಾರ ಕ್ಯೂಬಾದಲ್ಲಿ ಭಯೋತ್ಪಾದಕ ಗಂಪುಗಳಿಗೆ ಬೆಂಬಲ ನೀಡುತ್ತಾ ಬಂದಿದೆ. ಅಮೇರಿಕೆಯ ಸೆನೆಟ್ಟಿನಲ್ಲಿ ಕ್ಯೂಬಾ ದೇಶಕ್ಕೆ ನಾಗರೀಕರು ಸುಲಭವಾಗಿ ಭೇಟಿ ನೀಡಲು ಅವಕಾಶ ಒದಗಿಸಲು ಮತ್ತು ಅಮೇರಿಕಾದಲ್ಲಿರುವ ಕ್ಯೂಬನ್ನರು ಕ್ಯೂಬಾದಲ್ಲಿರುವ ತಮ್ಮ ಸಂಬಂಧಿಗಳಿಗೆ ಹಣ ಕಳುಹಿಸುವ ವಿಧಿ ವಿಧಾನಗಳನ್ನು ಸರಳಗೊಳಿಸಲು ಬಹುಮತ ಇದ್ದರೂ ಬುಶ್ ಸರ್ಕಾರ ಕ್ಯೂಬಾದ ಮೇಲೆ ಆರ್ಥಿಕ ದಿಗ್ಬಂಧನ ಮತ್ತು ಕ್ಯೂಬಾಕ್ಕೆ ನಾಗರೀಕರ ಭೇಟಿಗೆ ಅನುವು ಮಾಡಿಕೊಡುವುದು ಸಾಧ್ಯವಿಲ್ಲವೆಂದು ವಾದಿಸುತ್ತಿದೆ. ಕ್ಯೂಬಾ ದೇಶಕ್ಕೆ ಸಂಬಂಧಿಸಿದಂತೆ ಅಮೇರಿಕಾ ಕಾಂಗ್ರೆಸ್‌ನಲ್ಲಿ ಒಪ್ಪಿಗೆಯಾಗಿರುವ ಕಾನೂನುಗಳು ಅಂತರರಾಷ್ಟ್ರೀಯ ವ್ಯಾಪಾರಿ ಒಪ್ಪಂದಗಳಿಗೆ ವ್ಯತಿರಿಕ್ತವಾಗಿದೆ. ಉದಾಹರಣೆಗೆ ೧೯೯೨ ರಲ್ಲಿ ಜಾರಿಗೆ ಬಂದ ಟೊರೆಸಿಲಿ ಕಾನೂನು ಮೂರನೆಯ ಜಗತ್ತಿನಲ್ಲಿರುವ ಅಮೇರಿಕಾ ಮೂಲದ ಕಂಪನಿಗಳೂ ಕೂಡ ಕ್ಯೂಬಾ ದೇಶಕ್ಕೆ ಔಷಧ ಹಾಗೂ ಆಹಾರ ಸಾಮಗ್ರಿಗಳನ್ನು ರಫ್ತು ಮಾಡುವುದನ್ನು ಬಹಿಷ್ಕರಿಸುತ್ತದೆ. ಅಂತೆಯೆ ೧೯೯೬ ಹೆಲ್ಮ-ಬರ್ಟನ್ ಕಾನೂನು ಕ್ಯೂಬಾ ದೇಶದಲ್ಲಿ ಬಂಡವಾಳ ಹೂಡಿಕೆಯನ್ನು ನಿಷೇಧಿಸುತ್ತದೆ.

ಕ್ಯೂಬಾ ಸರ್ಕಾರ ಮಾಡಿರುವ ಒಂದು ಅಂದಾಜಿನ ಪ್ರಕಾರ ೨೦೦೨ ನೇ ಇಸವಿಯಲ್ಲಿ ತನ್ನ ಮೇಲೆ ಹೇರಿರುವ ದಿಗ್ಬಂಧನದಿಂದಾಗಿ ೬೮೫ ಮಿ ಡಾಲರ್‌ಗಳನ್ನು ವಿದೇಶಿ ವ್ಯಾಪಾರವಿಲ್ಲದೆ ನಷ್ಟಮಾಡಿಕೊಂಡಿದೆ. ಕಳೆದ ೪ ದಶಕಗಳಲ್ಲಿ ಅದು ೭೨ ಬಿಲಿಯನ್ ಡಾಲರಗಳಷ್ಟು ಹಣವನ್ನು ಕಳೆದುಕೊಂಡಿರುವುದಾಗಿ ತಿಳಿಸಿದೆ. ಅಮೇರಿಕಾದ ಈ ದಿಗ್ಬಂಧನದಿಂದಾಗಿ ಕ್ಯೂಬಾ ಕಳೆದ ವರ್ಷ ಏಶಿಯಾ ಮಾರುಕಟ್ಟೆಯಲ್ಲಿ ೧೧.೭ ಮಿಲಿಯನ್ ಡಾಲರ್ ಪರ್ಯೋಪಕರಣಗಳನ್ನು ಕೊಳ್ಳಬೇಕಾಗಿ ಬಂದದ್ದರಿಂದ ಹೆಚ್ಚಿನ ಹಣವನ್ನು ತೆರಬೇಕಾಗಿ ಬಂದಿತು. ಕ್ಯೂಬಾ ದೇಶದ ಆರೋಗ್ಯ ಮತ್ತು ಕೃಷಿ ಕಾರ್ಯಕರ್ತರಿಗೆ

ದೊರೆತಿರುವ ವೈಜ್ಞಾನಿಕ ತರಬೇತಿ ಮತ್ತು ಮತ್ತು ತ್ಯಾಗದ ಫಲವಾಗಿ ಆ ದೇಶದ ಆರೋಗ್ಯ ಮತ್ತು ಕೃಷಿ ಅಂತಹ ಹದಗೆಟ್ಟಿಲ್ಲ. ಆದರೆ ಕಳೆದ ವರ್ಷ ಸಾರ್ಸ್ ಸಾಂಕ್ರಮಿಕ ರೋಗ ತಲೆದೋರಿದಾಗ ರೋಗ ಪರೀಕ್ಷೆಗೆ ಬೇಕಾದ ಉಪಕರಣಗಳು ಕ್ಯೂಬಾ ದೇಶಕ್ಕೆ ದೊರಕಲಿಲ್ಲ, ಏಕೆಂದರೆ ಆ ಉಪಕರಣಗಳನ್ನು ತಯಾರಿಸುವ ಕಂಪನಿಗಳಲ್ಲಿ ಹೆಚ್ಚಿನವು ಅಮೇರಿಕಾ ಮೂಲದವು. ಈ ವರ್ಷದ ಏಪ್ರಲ್‌ನಲ್ಲಿ ಅಮೇರಿಕಾ ದೇಶದ ಒಂದು ಸ್ವಯಂ ಸೇವಾ ಸಂಸ್ಥೆ ಮಾನವೀಯ ದೃಷ್ಟಿಯಿಂದ ರೋಗ ತಪಾಸಣೆಗೆ ಕ್ಯೂಬಾ ದೇಶಕ್ಕೆ ೪೨೩ ಕಂಪ್ಯೂಟರ್‌ಗಳನ್ನು ಕಳುಹಿಸಲು ಮುಂದೆ ಬಂದಾಗ ಬುಶ್ ಸರ್ಕಾರ ಅದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಅಲ್ಲದೆ ಕ್ಯೂಬಾದಲ್ಲಿರುವ ಭಿನ್ನಮತೀಯರಿಗೆ ಅಲ್ಲಿನ ವಿಮಾನಗಳನ್ನು,ನಾವೆಗಳನ್ನು ಅಪಹರಿಸಿ ಫ್ಲೋರಿಡಾ ರಾಜ್ಯದಲ್ಲಿ ಆಶ್ರಯ ಪಡೆಯಲು ಅವಕಾಶ ಮಾಡಿಕೊಡುತ್ತಿದೆ. ಬುಶ್ ಸರ್ಕಾರದ ಸುತ್ತ ಮುತ್ತಲೂ ಕ್ಯೂಬಾ ವಿರೋಧಿ ಬಣಗಳೇ ಇವೆ. ಇವು ಕ್ಯೂಬಾ ದೇಶದ ಮೇಲೆ ಅಮೇರಿಕಾ ಸರ್ಕಾರ ಶಸ್ತ್ರದಾಳಿ ನಡೆಸಲು ಚಿತಾವಣೆ ಕೊಡುತ್ತಿವೆ.


ಬುಶ್ ಕೂಡಾ ತಾನು ಚುನಾವಣೆಯಲ್ಲಿ ಮತ್ತೆ ಆರಿಸಿ ಬರಲು ಫ್ಲೋರಿಡಾದಲ್ಲಿರುವ ಕ್ಯೂಬನ್-ಅಮೇರಿಕನ್ ಓಟುಗಳು ಬಹಳ ಮುಖ್ಯ ಎಂಬುದನ್ನು ಅರಿತಿದ್ದಾರೆ. ಈ ಕ್ಯೂಬನ್ನರು ಬಲಪಂಥೀಯರಾಗಿದ್ದು ಫೆಡರಲ್ ಕ್ಯಾಸ್ಟ್ರೋ ವಿರೋಧಿಗಳಾಗಿದ್ದಾರೆ. ಈ ಜನರು ತಮ್ಮ ಭಯೋತ್ಪಾದಕ ಕೆಲಸಗಳಿಂದ ಮತ್ತು ಇತರೆ ಅಪರಾಧಿ ಚಟುವಟಿಕೆಗಳಿಂದ ಈಗಾಗಲೇ ಕುಖ್ಯಾತರಾಗಿದ್ದಾರೆ. ಅಮೇರಿಕಾದ ಕಳೆದ ಸಾರ್ವಜನಿಕ ಚುನಾವಣೆಯ ಸಂದರ್ಭದಲ್ಲಿ ಫ್ಲೋರಿಡಾದಲ್ಲಿ ಆದ ಓಟುಗಳ ಮೋಸದ ಆಟದಲ್ಲಿ ಈ ಜನರ ಕೈವಾಡವಿತ್ತು.

ಬುಶ್ ಸರ್ಕಾರ ಅಂತರ ರಾಷ್ಟ್ರೀಯ ನಿಯಮಗಳನ್ನು ತೂರಿ ಹವಾನ ದ್ವೀಪಗಳಿಂದ ಶಕ್ತಿಶಾಲಿ ರೇಡಿಯೋ ತರಂಗಗಳನ್ನು ಬಳಸಿ ಕ್ಯೂಬಾ ಸರ್ಕಾರದ ವಿರುದ್ಧ ಬಂಡೇಳುವಂತೆ ಪ್ರಚೋದಿಸುವ ರೇಡಿಯೋ ಕಾರ್ಯಕ್ರಮಗಳು ಕ್ಯೂಬಾವನ್ನು ತಲುಪಲು ಸಹಾಯ ಮಾಡುತ್ತಿದೆ.

ಕ್ಯೂಬಾ ದೇಶಕ್ಕೆ ಭೇಟಿ ಕೊಡುವ ಅಮೇರಿಕಾದ ನಾಗರೀಕರಿಗೆ ಪೋಲೀಸರಿಂದ ಸಿಗುವ ಕಿರುಕುಳವಂತು ಅಸಾಧ್ಯ.

ಸಾಭಾರ: ಫ್ರಂಟ್ ಲೈನ್

ಜನಪದ ನಿಲಯದ ಅಂತರಂಗದಲ್ಲಿ...ಒಂದು ಭಾವನಾತ್ಮಕ ಸ್ಪಂದನ



ಕಳೆದೆರಡು ಸಂಚಿಕೆಗಳಲ್ಲಿ ಬಂದಜನಪದನಿಲಯದ ರೇಖಾಚಿತ್ರ ಹಾಗೂ ಲೇಖನ ನೆನಪು ಮತ್ತು ಅನುಭವಗಳ ಬಹುಪದರಗಳನ್ನು ಮೀಟಿ ಮೊಗೆದಿವೆ.

ಈಗ್ಗೆ ಹತ್ತು ಹದಿನಾಲ್ಕು ವರ್ಷಗಳ ಹಿಂದೆ, ಇಂಗ್ಲೆಂಡಿನ ಹುಡುಗನೊಬ್ಬ ಬರೆದಿದ್ದ ಜನಪದ ನಿಲಯದ ಬಾವಿಯ ರೇಖಾ ಚಿತ್ರವನ್ನು ಆಗಿನ ಜನಪದ ವಿಚಾರ ಸಂಚಿಕೆಯೊಂದರ ಮುಖ ಪುಟವಾಗಿ ಬಳಸಿದ್ದೆವು ಎಂದು ನೆನಪು.

ನೆನಪುಗಳನ್ನು ಎಷ್ಟೇ ವರ್ಣರಂಜಿತವೆಂದು ವರ್ಣಿಸಿದರೂ ಅವು ಭಾಸವಾಗುವುದು ಪ್ರಾಯಶ: ಕಪ್ಪು ಬಿಳುಪಿನ ರೇಖುಗಳಲ್ಲಿ, ಕಾಲದ ದೂರದಲ್ಲಿ ಕೆಲವು ಮಾಸಿ, ಕೆಲವು ಆಳ ರೇಖುಗಳಷ್ಟೇ ಉಳಿವ ಬಗೆ ಅದು.

ನಿಲಯದ ಒಡ್ಡು ಒಡ್ಡಾದ ಬಾಗಿಲುಗಳು; ಈಗಷ್ಟೇ ಪರಿಚಯವಾಗಿ, ಕೊಂಚ ಸೆಲ್ಫ ಕಾನ್ಷಿಯಸ್ ಆಗಿ ಕೂತ ಅತಿಥಿಗಳಂತಿರುವ ಸೋಫಾ, ಮೇಜು, ಮಂಚಗಳು, ಮಾಳಿಗೆ ಮೆಟ್ಟಿಲ ಪಕ್ಕದ ಮಂಚದಲ್ಲಿ ಕೂತ ಚರಕ, ಗೋಡೆಯಲ್ಲಿ- ತಲೆಮಾರುಗಳ ಬ್ರಾಹ್ಮಣ ಕುಟುಂಬದ ಶ್ರದ್ಧೆಯಲ್ಲೇ ಗಟ್ಟಿಯಾದಂತಿರುವ ದೇವರ ಫೋಟೋಗಳು; ತೀರಾ ಆಧುನಿಕವಾದ ಯಾವುದೋ ಗೊಂಬೆ ಗ್ರೀಟಿಂಗಳು. ತೀರಾ ಭಾರತವೇ!

ನಾನೊಮ್ಮೆ ಬೆಂಗಳೂರಿಗೆ ಹೋಗಿದ್ದಾಗ ಸಿಪಿಎಂ ಮುಂದಾಳತ್ವದ ರೈತ ಕಾರ್ಮಿಕ ರ್‍ಯಾಲಿ ನಡೀತಾ ಇತ್ತು. ಅಲ್ಲಿಂದ ಕಾರ್ಲ್‌ಮಾರ್ಕ್ಸನ ಚಿತ್ರ ಬಟ್ಟೆಯಲ್ಲಿ ಪ್ರಿಂಟಾದದ್ದು-ತಂದಿದ್ದೆ. ಅದು ರೇಖಾ ಚಿತ್ರವೇ. ಕೆಂಪು ಕಪ್ಪು; ಉಳಿದದ್ದು ಬಿಳಿ! ದಾದಾ ಅದನ್ನು ತಾವು ಕೂರುವ ಕುರ್ಚಿಯ ಹಿಂಭಾಗದ ಗೋಡೆಗೆ ನೇತು ಹಾಕಿದ್ದರು. ಸುತ್ತ ಪೂರಾ ಗಾಂಧಿ, ಖಾದಿ, ಸಾತ್ವಿಕ ಋಜು ದೇವರುಗಳು; ಸರಳ ಲೆಕ್ಕದ ರಶೀದಿ ಪುಸ್ತಕಗಳು. ಇಲ್ಲೊಬ್ಬ ತಿವಿದ ನೋಟದ ರಾಜ ಋಷಿ ಮಾರ್ಕ್ಸ.

ಎಂದೂ ಒಳಗಿನ ಹೆಣಿಕೆಯ ಭಾಗವಾಗದೇ, ತನ್ನ ಪ್ರತ್ಯೇಕ ಚೂಪು ನೋಟದಿಂದಲೇ ಸವಾಲೆಸೆವ ಈ ಚಿತ್ರ- ಜನಪದ ನಿಲಯದ ಸೈದ್ಧಾಂತಿಕ ಹಠದ ಹಿಂದಿರುವ ಮೂಲ ಸವಾಲಿನಂತೆ ನನಗೆ ಗೋಚರಿಸಿದೆ. ಜನಪದ ನಿಲಯದ ಚರ್ಚೆಗಳಲ್ಲಿ ಒಂದು ವಿಚಿತ್ರ ಬಳಕೆಯನ್ನೂ, ಕಸಿವಿಸಿಯನ್ನೂ, ಉದ್ವೇಗವನ್ನೂ ಕಂಡಿದ್ದೇನೆ.

ಗಾಂಧಿ ಇಂದಿಗೂ ರೆಲೆವೆಂಟ್ ಅನ್ನಿಸಿ ನಿತ್ಯ ಅಗತ್ಯದ ತುರ್ತಿನ ಬಗ್ಗೆ ಚರ್ಚೆಯಾದಲ್ಲೆಲ್ಲಾ ಈ ವಿಚಿತ್ರವನ್ನು ಕಂಡು ಅನುಭವಿಸಿದ್ದೇನೆ.

ಕಂಡರೂ ಕಾಣದಂತೆ ತನ್ನ ಪಾಡಿಗೆ ನಡೆವ ಜಗವ ಕಂಡು ಗಾಂಧಿ ಮೂಸೆಯಲ್ಲಿ ಅರಳಿದ ಹಳಬರು ವಿಹ್ವಲರಾಗುತ್ತಿದ್ದಾರೆ. ಚುಚ್ಚುವ ಗಾಂಧಿಯನ್ನು ಅಂಟಿಸಿಕೊಂಡರೆ ನಡೆವ ದಾರಿ ತೊಡರುತ್ತದೆ ಎಂಬ ಕಿರಿಕಿರಿ ಲೌಕಿಕ ಪ್ರಜ್ಞೆ ಯ ಮಧ್ಯ ವಯಸ್ಕರಿಗೆ ಇದನ್ನು ಬಿಡಲಾರೆ, ಅದನ್ನು ತಳ್ಳಲಾರೆ ಎಂಬ ವ್ಯಗ್ರ ಉದ್ವೇಗ ತರುಣರಿಗೆ.

ಜನಪದ ನಿಲಯದಲ್ಲಿ ನಡೆದ ಚರ್ಚೆಗಳಲ್ಲಿ ಗಾಂಧಿ ಹೀಗೆ ಜಂತಿಯಲ್ಲಿ ಹರಿವ ಹಾವಿನಂತೆ ನಮ್ಮ ಜಾಗೃತ ಪ್ರಜ್ಞೆಯ ವಾರೆಗಣ್ಣಿನ ಕೇಂದ್ರವಾಗಿ ನಿದ್ದೆಗೆಡಿಸಿದ್ದಿದೆ.

* * *

ಮೇಲುಕೋಟೆಯಲ್ಲಿ ಜನಪದ ನಿಲಯ ಇರುವುದು ಆಕಸ್ಮಿಕ ಅಲ್ಲ ಎಂದು ಇತ್ತೀಚೆಗೆ ನನಗೆ ಅನ್ನಿಸತೊಡಗಿದೆ. ಮೇಲುಕೋಟೆಯ ಒಟ್ಟಾರೆ ದೇವಾಲಯ, ಕಲ್ಯಾಣಿ, ಮನೆಗಳು, ಸುಮಾರಾಗಿ ಹಾಗೇ ಉಳಿದುಕೊಂಡಿವೆ. ಆಧುನಿಕತೆಯ ಮೋಹಿನಿ ಮುದ್ರೆಗಳೆಲ್ಲಾ ಅದರ ದೇಹವನ್ನಷ್ಟಿಷ್ಟು ತಡವಿದರೂ, ನೆತ್ತಿಗೇ ಕೈ ಇಡಲು ಪ್ರೇರೇಪಿಸಿದಂತಿಲ್ಲ. ಹೀಗೆ ತನ್ನ ಪಾಡಿಗೆ ತಾನು - ಸೆಟೆದು ಪ್ರತ್ಯೇಕವಾಗಿಯೂ ಕಾಣಿಸದೇ, ಒಗ್ಗಿ ಒಪ್ಪಿಸಿಕೊಂಡಂತೆಯೂ ಇರದೇ- ಬಾಳುವ ರೀತಿ ವಿಶಿಷ್ಟವಾದುದು.

ಅನ್ಯವನ್ನು ಪೂರಾ ಧಿಕ್ಕರಿಸದೇ, ಪೂರಾ ಸ್ವೀಕರಿಸದೇ ಇರುವುದೇ ಒಂದು ತಾತ್ವಿಕ ಸ್ಟೇಟ್ ಮೆಂಟ್; ಗಾಂಧೀಯವಾದದ್ದು

* * *

ಗಾಂಧೀಯ ಮಿಮಾಂಸೆಯನ್ನು ಒಪ್ಪಿಕೊಂಡು ವಾಸ್ತವ ಜಗತ್ತಿನೊಂದಿಗೆ ಕ್ರಿಯಾಶೀಲವಾಗುವಾಗ ಬರುವ ಸಂಕಷ್ಟಗಳೂ ವಿಶಿಷ್ಟವೇ. ಈ ದೇಶದಲ್ಲಿ ಗಾಂಧಿವಾದಿಯೊಬ್ಬನನ್ನು- ಎಷ್ಟೇ ಕಿರಿಕಿರಿ ಆದರೂ-ಶತ್ರುವೆಂದು ಇನ್ನೂ ಬಗೆದಿಲ್ಲ. ಸಾಮಾನ್ಯವಾಗಿರುವ ಪ್ರತಿಕ್ರಿಯೆಯೆಂದರೆ ಗೌರವಸಹಿತ ನಿರ್ಲಕ್ಷ್ಯ. ಜನಪದ ನಿಲಯವೂ ಇದಕ್ಕೆ ಹೊರತಲ್ಲ. ಈ ಮುಜುಗರವನ್ನು ನಿಲಯ

ಸ್ವೀಕರಿಸಿದ ರೀತಿಯೂ ಅನನ್ಯ.

ಅಂಜನದ ತಟ್ಟೆಯಲ್ಲಿ ಇಣುಕಿದರೆ ನನಗೆ ನಾಲ್ಕು ಮುಖಗಳು ಗೋಚರಿಸುತ್ತಿವೆ . ವಾಸ್ತವ ಜಗತ್ತನ್ನು ಅರ್ಥಮಾಡಿಕೊಳ್ಳುತ್ತಲೂ, ತನ್ನಲ್ಲಿರುವ ಮೂಲಿಕೆ, ಸಂಜೀವಿನಿಯಾಗಬಲ್ಲುದು ಎಂದು ನಂಬಿದವರು ದಾದಾ. ಅವರಿಗೆ ತಾತ್ವಿಕ ಧರ್ಮಸಂಕಟವಿಲ್ಲ. ಏನಿದ್ದರೂ ಉಪಕರಣಗಳ ಕೊರತೆ ಎಂಬ ಉದ್ವೇಗವಷ್ಟೇ.

ಸಂತುವೆಂಬ ಶಾಪಗ್ರಸ್ತ ಸಂತನಿಗೆ ಅಂಥಾ ಬಾಹ್ಯತೀವ್ರತೆಯಿಲ್ಲ. ಪ್ರಪಂಚ ಗಿರಕಿ ಹೊಡೆವ ರೀತಿ ಸರಿ ಇಲ್ಲ; ತಾನು ಬಾಳುವ ರೀತಿಯೇ ಪ್ರತಿಕ್ರಿಯೆಯೂ, ಪರ್ಯಾಯ ರೂಪಕವೂ ಆಗಬಹುದೇ ಎಂದು ಆಶಿಸುತ್ತಾನೆ. ಮರುಗಳಿಗೆ ಇದು ವೈಯುಕ್ತಿಕ ಏಕಾಂತದ ಮಾದರಿಯಾ ಎಂದು ಕಸಿವಿಸಿಪಡುತ್ತಾನೆ.

ಪುಟ್ಟದಾಗಿ ಭಿನ್ನವಾಗಿ ಕಟ್ಟುವ ಕ್ರಿಯೆಯೇ ಒಂದು ಪರ್ಯಾಯ ಮಾದರಿಯನ್ನು ತೋರುವ ಬಗೆಯೆಂದು ನಂಬಿದ್ದಾನೇನೋ ಎಂಬಂತೆ ಕೆಲಸ ಮಾಡುವ ಸುಗ್ಗಿ ನಿತ್ಯದಲ್ಲೂ ಪರರ ಸುಖ ಕಾಣಬಲ್ಲ.

ಸುಗ್ಗಿ, ಸಂತು ಇಬ್ಬರೂ– ದಾದಾನ ವಾಂಛೆಯ ಪ್ರತ್ಯೇಕ ಸ್ವರೂಪಗಳೋ, ದಾದಾನ ನಡೆಗೆ ಒದಗಿದ ಪ್ರತಿಕ್ರಿಯೆಗಳೋ ಗೊತ್ತಾಗುತ್ತಿಲ್ಲ.

ನಾಲ್ಕನೇ ಮುಖ– ನದಿರೇಖುಗಳ ಸುಕ್ಕಿನ ಸಹಿತ ಹರಡಿ ಕೂತ ಭಾರತದ ಪ್ರಾಕೃತಿಕ ನಕಾಶೆಯಂತಿದೆ.

ಅಮ್ಮ

ಸರಳ ನಿಷ್ಠೆ, ಅನುಷ್ಠಾನಗಳೇ ಜೀವಮಾನದ ಸಾಫಲ್ಯದ ಅಳತೆಗೋಲಿರಬೇಕು.ಎಲ್ಲವೂಗೊತ್ತು.ವಾಕ್ ಗೋಚರವೋ,ಗೊತ್ತಾಗುವುದಿಲ್ಲ ಎಂದು ನನ್ನ ಮಿತ್ರರೊಬ್ಬರು ನಾನು ಗೌರವಿಸುವ ಆಧ್ಯಾತ್ಮಿಕ ಮಾರ್ಗದರ್ಶಿಯೊಬ್ಬರ ಬಗ್ಗೆ ಹೇಳಿದ್ದು ಅಮ್ಮನ ಬಗ್ಗೆಯೂ ನಿಜ.

ಈಗೇನೋ ಭೌತಿಕ ಜೀವನವನ್ನು ಸುರಳೀತಗೊಳಿಸುವ ಕೆಲವು ಸೌಲಭ್ಯಗಳು ಒದಗಿವೆ. ಆದರೆ ಇವೆಲ್ಲ ಬರುವ ಮೊದಲು ಅಮ್ಮ ಜನಪದ ನಿಲಯವನ್ನೂ, ಅದರ ಅಂತ:ಸತ್ವವನ್ನು ಕಾಪಿಟ್ಟ ಬಗೆ ಅನನ್ಯ. ಜನಪದ ನಿಲಯದ ಲಂಗರು ಅಮ್ಮ.

ವಸ್ತುವಿಗೆ, ಕಾಯಕ್ಕೆ ಪೂರ್ವ ಕಲ್ಪನೆಗಳಿಲ್ಲ. ಅದು ಅದೇ. ಜನಪದ ನಿಲಯವೂ ಅಂಥಾದ್ದೇ. ಅದಕ್ಕೆ ಹೋಲಿಕೆಗಳಿಲ್ಲ. ಅದು ಸೃಜಿಸುವ ಕ್ರಿಯೆ, ಪ್ರತಿಕ್ರಿಯೆಗಳಿಗೆ ಪೂರ್ವಾಪರ ಹೋಲಿಕೆಗಳಿರಬಹುದು.

* * *

ಜೀವನ ಮತ್ತು ಜೀವನದ ಸರ್ವೋಚ್ಛ ನಿರ್ಮಿತಿಯೆಂದು ನಾನು ತಿಳಿದಿರುವ ಸಾಹಿತ್ಯ – ಇವೆರಡೂ ಪರಸ್ಪರ ಹೆಣೆಯುತ್ತಾ, ಹೊರಳಿ ನೋಡುತ್ತಾ, ನಂಬುಗೆ ಮತ್ತು ಬದ್ಧತೆಗಳೆರಡನ್ನೂ ಬಲಗೊಳಿಸುವ ಪುರಾವೆ, ಇರಾದೆಗಳೆರಡನ್ನೂ ಸೃಷ್ಟಿಸಬಲ್ಲವು ಎಂದು ಗಾಢವಾಗಿ ನಂಬಿದವ ನಾನು.

ಈಗ ನಾನಿರುವ ಬದುಕಿನ ಚೌಕಟ್ಟಿನಲ್ಲಿ ನನ್ನಂಥವನಿಗೆ ಚಿಂತನೆಯೇ ಕ್ರಿಯೆ. ಸ್ಪಷ್ಟತೆಯೇ ದಾರಿ. ಇದನ್ನು ಧ್ಯಾನಿಸಲು ಇರುವ ರೂಪಕ ಜನಪದ ನಿಲಯ.

– ಕೆ.ಪಿ.ಸುರೇಶ್.

* * *

ಹಿರಿಯ ರಚನಾತ್ಮಕ ಕಾರ್ಯಕರ್ತ ಬಾಬಾ ಆಮ್ಟೆ

ಡಿಸೆಂಬರ್ ೨೬ ಅವರ ಹುಟ್ಟಿದ ದಿನ. ಈಗ ಅವರಿಗೆ ೯೦ ವರ್ಷ. ಬಾಬಾ ಆಮ್ಟೆ ಗಾಂಧೀಜಿಯವರ ಸರ್ವೋದಯ ವಿಚಾರದಲ್ಲಿ ನಂಬಿಕೆಯಿಟ್ಟವರು. ಅವರು ಪ್ರಭಾವಿ ಮತ್ತು ಅತ್ಯಂತ ಕ್ರಿಯಾಶೀಲ ವ್ಯಕ್ತಿಯಾಗಿದ್ದರೂ ಸಹ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸದೆ, ಗಾಂಧೀಜಿಯವರು ರೂಪಿಸಿದ್ದ ೨೧ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಒಂದಾಗಿದ್ದ ಕುಷ್ಠರೋಗಿಗಳ ಸೇವಾ ಕಾರ್ಯವನ್ನು ಆಮ್ಟೆ ಅಂಗೀಕರಿಸಿದರು. ಸಮಾಜದಲ್ಲಿ ಅತ್ಯಂತ ಉದಾಸೀನಕ್ಕೆ ಮತ್ತು ಅವಹೇಳನಕ್ಕೆ ತುತ್ತಾಗಿದ್ದ ಕುಷ್ಠರೋಗಿಗಳ ಅಭ್ಯುದಯಕ್ಕಾಗಿ ದುಡಿದಂಥ ವ್ಯಕ್ತಿ ಬಾಬಾ ಆಮ್ಟೆ. ಕುಷ್ಟ ರೋಗಿಗಳ ಸರ್ವತೋಮುಖ ಪುನರ್ ವಸತಿಗಾಗಿ, ಮಹರಾಷ್ಟ್ರದ ಚಂದ್ರಪುರ ಜಿಲ್ಲೆಯಲ್ಲಿ ಆನಂದವನ ಎಂಬ ಕೇಂದ್ರವನ್ನು ಸ್ಥಾಪಿಸಿದರು. ಆ ಕೇಂದ್ರದ ಹೆಬ್ಬಾಗಿಲಿನಲ್ಲಿ ಬರೆಯಲ್ಪಟ್ಟಿರುವ ಈ ಸೂಕ್ತಿ ಅವರ ವ್ಯಕ್ತಿತ್ವ ಮತ್ತು ಕಾರ್ಯದ ಗುರಿಯನ್ನು ಸೂಚಿಸುತ್ತದೆ

ನನ್ನ ಆತ್ಮವನು ಅರಸಿದೆ,
ಅದು ಸಿಕ್ಕಲಿಲ್ಲ.
ನನ್ನ ದೇವರನ್ನು ಅರಸಿದೆ,
ದೇವ ಕಾಣಲಿಲ್ಲ.
ನನ್ನ ಸಹೋದರರನ್ನು ಅರಸಿದೆ,
ದೊರಕಿತು ಮೂರೂ.

ಆಮ್ಟೆ ಅವರ ಸೇವೆಯನ್ನು ಪರಿಗಣಿಸಿದ ಭಾರತ ಸರ್ಕಾರ ಅವರಿಗೆ ಪದ್ಮವಿಭೂಷಣ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದೆ. ಆಮ್ಟೆ ನಮ್ಮೊಂದಿಗೆ ನೂರ್ಕಾಲ ಬಾಳಲಿ.

* * *

ಹರಿನೀರ ತಳಕು ಮನೆಮನೆ ಬೆಳಕು

-ಕಾರಂತ ಪೆರಾಜೆ

ಈ ವರುಷ ಮಳೆಯ ಕಣ್ಣುಮುಚ್ಚಾಲೆ. ಮುಂದೆ ನೀರಿಗೂ ತತ್ವಾರ. ಜಲಾಶಯ, ಜಲಧಾರೆಗಳು ಕ್ಷೀಣಿಸುತ್ತಿವೆ. ವಿದ್ಯುತ್ ಅಂತೂ ಕನಸಿನ ಮಾತೋ ಏನೋ? ಕತ್ತಲೆಯಲ್ಲಿ ಬದುಕುವ ದಿನಗಳಿಗೆ ಸಜ್ಜಾಗಬೇಕಾದ ದಿನಗಳು ಬರಲಿವೆ.

ಜಲಪಾತವಿದ್ದರೆ ವಿದ್ಯುತ್ ಉತ್ಪಾದನೆ ಸಾಧ್ಯ. ಸಮೃದ್ಧ ಜಲವಿರುವಾಗ ಖಾಸಗಿಯಾಗಿ ನಾವ್ಯಾಕೆ ವಿದ್ಯುತ್ ಉತ್ಪಾದಿಸಬಾರದು? ಊರೆಲ್ಲಾ ಕತ್ತಲೆಯಲ್ಲಿದ್ದಾಗಲೂ ನಮ್ಮ ಮನೆಯನ್ಯಾಕೆ ಬೆಳಗಬಾರದು? ಸಾಧ್ಯ ಎಂಬುದನ್ನು ಕೊಪ್ಪ ತಾಲೂಕು ಜಯಪುರದ ರತ್ನಾಕರ ಮಾಡಿ ತೋರಿಸಿದ್ದಾರೆ. ಲಭ್ಯ ನೀರನ್ನು ಬಳಸಿಕೊಂಡು ವಿದ್ಯುತ್ ಉತ್ಪಾದಿಸಿ ಯಶ ಸಾಧಿಸಿದ್ದಾರೆ.

ಮಲೆನಾಡಿನಲ್ಲಿ ನಿಸರ್ಗದತ್ತವಾಗಿ ಹರಿವ ನೀರೇ ರತ್ನಾಕರ್ ಆವಿಷ್ಕಾರದ ಮೂಲ ಸಂಪನ್ಮೂಲ. ಬೇಕೆಂದಾಗ, ಬೇಕಾದಾಗ ಪಡೆಯುವ ವ್ಯವಸ್ಥೆ. ವಿದ್ಯುತ್ ಉತ್ಪಾದನೆಗಿಲ್ಲಿ ಡೀಸೆಲ್ ಬೇಡ, ಪೆಟ್ರೋಲು ಬೇಡ.

ಕೆಳ' ಹರಿವ ನೀರನ್ನು ಒಂದು ವ್ಯವಸ್ಥೆಗೆ ಒಳಪಡಿಸಿ, ಶಕ್ತಿಯನ್ನಾಗಿ ಪಡೆಯುವುದು ಜಲವಿದ್ಯುತ್ ಉತ್ಪಾದನಾ ಗುಟ್ಟು. ಕಳೆದ ಹತ್ತು ವರುಷದ ಸಾಹಸದ ಫಲಶ್ರುತಿ. ಈಗಾಗಲೇ ಎಂಭತ್ಮೂರು ಕಿರು ಘಟಕಗಳನ್ನು ಸ್ಥಾಪಿಸಿ ನೂರಾರು ಮನೆಗಳಿಗೆ ಬೆಳಕು ನೀಡಿದ್ದಾರೆ. ಮನಕ್ಕೆ ಸಂತಸ ತಂದಿದ್ದಾರೆ.

ರತ್ನಾಕರ್ ಜಯಪುರದ ಸನಿಹದ ಗುಡ್ಡೆತೋಟದ ಹೊಸನೆಲದವರು. ಕೃಷಿ ಅವರ ವೃತ್ತಿ. ಆಗಾಗ್ಗೆ ಕೈಕೊಡುವ ವಿದ್ಯುತ್ ವ್ಯವಸ್ಥೆ. ಕಡಿಮೆ ವೋಲ್ಟೇಜ್, ವಿದ್ಯುತ್ ಇದ್ದರೂ ಮೇಣದ ಬತ್ತಿಯಷ್ಟೇ ಪ್ರಕಾಶ.ಇದಕ್ಕೊಂದು ಪರ್ಯಾಯವಾಗಲೇಬೇಕು. ಮೆಟ್ರಿಕ್ ಓದಿದ ರತ್ನಾಕರರ ತಾಂತ್ರಿಕ ಮನಸ್ಸು ಚುರುಕಾಯಿತು. ಹರಿನೀರನ್ನು ಬಳಸಿ, ಸೈಕಲ್ ಡೈನಮೋದಿಂದ ಒಂದೆರಡು ಚಿಕ್ಕ ಬಲ್ಬುಗಳನ್ನು ಉರಿಸುವಲ್ಲಿ ಯಶಸ್ಸಾದರು ಏನನ್ನೋ ಸಾಧಿಸಿದ ಹಿಗ್ಗು. ಮನೆಯ ತಟ್ಟೆ, ಲೋಟಗಳು ಈ ಹಂತದಲ್ಲಿ ತಿರುವು ಚಕ್ರದ ರೆಕ್ಕೆಗಳಾದವು. ಮನದ ಆಲೋಚನೆಗೆ ಪುಷ್ಟಿ ದೊರೆಯಿತು.

ರತ್ನಾಕರರ ತಾಂತ್ರಿಕ ಆಲೋಚನೆಗೆ ಜೀಪು, ಕಾರುಗಳ ಬ್ಯಾಟರಿಗಳು ಬಲಿಯಾದುವು. ನಿರಂತರ ಪ್ರಯೋಗ. ನ್ಯೂನತೆಯ ಹುಡುಕಾಟ. ಪರಿಹಾರ. ನಿವಾರಣೆ. ಜೋಗನಲ್ಲಿ ನೀರಿನಿಂದ ವಿದ್ಯುತ್ ಉತ್ಪಾದಿಸಿ ಊರಿಗೆಲ್ಲಾ

ಹಂಚುತ್ತಾರೆ. ನಮಗ್ಯಾಕೆ ಸಾಧ್ಯವಿಲ್ಲ? ಪ್ರಶ್ನೆ ಛಲವಾಯಿತು.

ಜಲಚಕ್ರ, ಆಧಾರಚಕ್ರ, ಪೈಪ್ ಗುಜರಿಯಿಂದ ಆಯ್ಕೆ. ಮನೆಯ ಪಕ್ಕ ಹರಿವ ನೀರನ್ನು ಪೈಪ್ ಮೂಲಕ ಜಲಚಕ್ರಕ್ಕೆ ಹಾಯಿಸಿ, ವಿದ್ಯುಜ್ಜನಕದ ಮೂಲಕ ವಿದ್ಯುತ್ ಪಡೆಯಲು ಆ ಬಲ್ಬುಗಳು ಉರಿಯಿತು. ಕನಸುಗಳು, ಕಲ್ಪನೆಗಳು ಸಾಕಾರಗೊಂಡವು. ಈ ವಿನ್ಯಾಸಕ್ಕೆ ಅವರು ಟರ್ಬೋ ಎಂದು ಕರೆದರು. ಆಗಲೇ ಲಕ್ಷ ರೂ. ಕೈಜಾರಿತ್ತು.

ಮುಂದೆ ಟರ್ಬೋ ರತ್ನಾಕರರ ಹೆಸರಿನೊಂದಿಗೆ ಹೊಸೆಯಿತು. ಜಯಪುರದಲ್ಲಿ ಟರ್ಬೋ ಅಂದರೆ ಸಾಕು, ರತ್ನಾಕರರ ಪರಿಚಯವಾಗುತ್ತದೆ.

ಟರ್ಬೋ ಹತ್ತು ಜನರಿಗೆ ಪರಿಚಯವಾಗಬೇಕು. ಇದೊಂದು ಕೈಗಾರಿಕೆಯಾಗಬೇಕು. ಜೀವನಕ್ಕೆ ದಾರಿಯಾಗಬೇಕು. ಹೀಗೆ ಹಲವು ವಿಚಾರಗಳು.ಒಂದೆರಡು ವಿನ್ಯಾಸಗಳನ್ನು ರೂಪಿಸಿ ಅದನ್ನು ಪ್ರದರ್ಶನಕ್ಕಿಟ್ಟರು. ಪ್ರಾತ್ಯಕ್ಷಿಕೆ ಮೂಲಕ ಹೇಳಿದರು. ಕೆಲವರು ಪ್ರೋತ್ಸಾಹಿಸಿದರು. ಕೆಲವರು ನಕ್ಕರು.

ಟರ್ಬೋವನ್ನು ವಿದ್ಯುತ್ ನಿಗಮವು ಪ್ರೋತ್ಸಾಹಿಸಬಹುದೆಂಬ ನಿರೀಕ್ಷೆಯಲ್ಲಿ ಅಧಿಕಾರಿಗಳೊಂದಿಗೆ ವ್ಯವಹರಿಸಿದರು. ನಿಮ್ಮ ಶ್ರಮ ಶ್ಲಾಘನೀಯ. ಆದರೆ ಇದನ್ನು ಅಕ್ರಮ ಎಂದು ಪರಿಗಣಿಸಿ ನಿಮ್ಮ ಮೇಲೆ ಏಕೆ ಕಾನೂನು ಕ್ರಮ ಕೈಗೊಳ್ಳಬಾರದು ಎಂಬ ಉತ್ತರ. ರತ್ನಾಕರ ತಬ್ಬಿಬ್ಬು. ಸ್ಥಳೀಯ ಶಾಸಕರ ಮೂಲಕ ಆಗಿನ ಮುಖ್ಯಮಂತ್ರಿ ಪಟೇಲರ ಸಂಪರ್ಕ. ಸ್ವಂತ ಉಪಯೋಗಕ್ಕಾಗಿ, ಸ್ವಂತ ಸ್ಥಳದ ನೀರನ್ನು ಬಳಸಿ ವಿದ್ಯುತ್ ಉತ್ಪಾದನೆ ಮಾಡಿಕೊಳ್ಳಬಹುದು. ಇದು ಇನ್ನೊಬ್ಬರಿಗೆ ತೊಂದರೆಯಾಗಬಾರದು, ಎಂಬ ತಾತ್ವಿಕ ಒಪ್ಪಿಗೆ. ಆಮೇಲೆ ಯಾರಿಂದಲೂ ಕಿರುಕುಳವಿಲ್ಲ.

ಸರಳ, ಸುಲಭ ವಿಧಾನ

ರತ್ನಾಕರ್ ವಿನ್ಯಾಸಿಸಿದ ಕಿರು ಜಲವಿದ್ಯುತ್ ಘಟಕದ ಕಾರ್ಯ ವಿಧಾನ ಸರಳ. ಮೇಲಿನಿಂದ ಹರಿದು ಬರುವ ಬಿಡು ನೀರು ಬೇಕು. ಮಲೆನಾಡಿನಲ್ಲಿ ಬಿಡುನೀರು ಸಮೃದ್ಧ. ನೀರ ಹರಿವು, ಮನೆಯ ವಿದ್ಯುತ್ ಅಗತ್ಯಕ್ಕನುಸಾರ ಸ್ಥಾವರ ನಿರ್ಮಾಣ. ಕನಿಷ್ಠ ಅರವತ್ತು ಅಡಿ ಎತ್ತರದಲ್ಲಿ ಮುನ್ನೂರು ಅಡಿ ದೂರದಲ್ಲಿ ನೀರ ಟ್ಯಾಂಕ್ ಇರಬೇಕು. ಟ್ಯಾಂಕಿನ ತಳದಿಂದ ನಾಲ್ಕು ಇಂಚು ಪಿವಿಸಿ ಪೈಪಿನಲ್ಲಿ ನೀರ ಹರಿವು. ಕೊನೆಯಲ್ಲಿ ಮೂರು ಇಂಚು, ಎರಡು ಇಂಚು ಮತ್ತು ಒಂದು ಇಂಚಾಗಿ ಪರಿವರ್ತನೆ. ಇದರಿಂದ ನೀರ ಒತ್ತಡ ಹೆಚ್ಚಾಗುತ್ತದೆ.

ಒಂದು ಇಂಚಿನ ಜೆಟ್ ಮೂಲಕ ರಭಸವಾಗಿ ನೀರು ಹೊರಹೊಮ್ಮುತ್ತದೆ.

ಜಲಚಕ್ರ ತಿರುಗುತ್ತದೆ. ಜಲಚಕ್ರಕ್ಕೆ ಚಾಲಕ ದಂಡವಿದ್ದು, ಇನ್ನೊಂದು ಬದಿ ನಿಯಂತ್ರಕ ಚಕ್ರವಿದೆ. ಅದರ ಪಕ್ಕ ಬೆಲ್ಟ್ ಚಕ್ರ. ಇಲ್ಲಿಂದ ವಿದ್ಯುಜ್ಜನಕಕ್ಕೆ ಬೆಲ್ಟ್ ಸಂಪರ್ಕ. ನೀರಿನ ಒತ್ತಡಕ್ಕೆ ಜಲಚಕ್ರ ತಿರುಗುತ್ತಿದ್ದಂತೆ, ವಿದ್ಯುಜ್ಜನಕದಲ್ಲಿ ಪರ್ಯಾಯ ವಿದ್ಯುತ್ ಉತಾದನೆ. ಮುಖ್ಯ ಸ್ವಿಚ್ಚಿನ ಕೆಲಸವಿಲ್ಲಿ ಗೇಟ್ವಾಲ್ವಿಗೆ. ವಿದ್ಯುತ್ ಹರಿವು ವ್ಯತ್ಯಾಸವಾಗುವುದಿಲ್ಲ. ಒಂದೇ ರೀತಿಯ ವಿದ್ಯುತ್ ಉತ್ಪಾದನೆಗೆ ನಿಯಂತ್ರಣ ಚಕ್ರ ಸಹಾಯ ಮಾಡುತ್ತದೆ.

ನೀರಿನ ದೂರ, ಇರುವ ಎತ್ತರ, ಬೇಕಾದ ವಿದ್ಯುತ್ ಈ ಅಂಶಕ್ಕನುಸಾರವಾಗಿ ನಿಯಂತ್ರಕ ಚಕ್ರ, ಜಲಚಕ್ರಗಳ ರಚನೆ. ಕನಿಷ್ಠ ಒಂದು ಕಿಲೋವ್ಯಾಟನಿಂದ ಇಪ್ಪತ್ತು ಕಿಲೋವ್ಯಾಟ್‌ವರೆಗೆ ವಿದ್ಯುತ್ ಉತ್ಪಾದನೆ ಸಾಧ್ಯ. ಜಲಚಕ್ರಕ್ಕೆ ನೀರು ಹರಿದ ನಲವತ್ತು ಸೆಕೆಂಡ್‌ನಲ್ಲಿ ವಿದ್ಯುತ್ ಉತ್ಪಾದನೆಯಾಗಿ ದೀಪ ಬೆಳಗುತ್ತದೆ.

ಕೆಪಿಟಿಸಿಎಲ್ ಒದಗಿಸುವ ವಿದ್ಯುತ್ತಿನಿಂದ ಏನೆಲ್ಲಾ ಸೌಲಭ್ಯವನ್ನು ನಾವು ಪಡೆಯುತ್ತೇವೆಯೋ, ಅಷ್ಟನ್ನು ಟರ್ಬೋದಿಂದ ಪಡೆಯಬಹುದು ಅನ್ನುತ್ತಾರೆ ರತ್ನಾಕರ್. ಟರ್ಬೋಗೆ ಬೇಕಾದ ಎಲ್ಲಾ ಸಲಕರಣೆಯನ್ನು ತನ್ನ ಕಾರ್ಯಗಾರದಲ್ಲಿ ರತ್ನಾಕರ್ ತಯಾರಿಸುತ್ತಾರೆ.

<u>ಘಟಕ ತಯಾರಿ</u>

ಮೊದಲಿಗೆ ಸ್ಥಳ, ಸನ್ನಿವೇಶ, ನೀರ ಸಂಪನ್ಮೂಲಗಳ ಲೆಕ್ಕಾಚಾರ, ಮಾರ್ಚ್, ಏಪ್ರಿಲ್, ಮೇ ತಿಂಗಳ ನೀರ ಹರಿವು ಎಷ್ಟಿದೆ ಎಂಬುದನ್ನು ಅವಲಂಬಿಸಿ ಕಿಲೋವ್ಯಾಟ್ ನಿರ್ಧಾರ. ಶೇ.೬೦ ಮುಂಗಡ. ತಿಂಗಳೊಳಗೆ ಘಟಕ ಸ್ಥಾಪನೆ, ವಿದ್ಯುತ್ ಸಂಪರ್ಕ.

ಈ ಮಧ್ಯೆ ನೀರಟ್ಯಾಂಕ್, ಸ್ಥಾವರ ಸ್ಥಾಪಿಸುವ ನೆಲಕ್ಕೆ ಕಾಂಕ್ರಿಟ್, ಪಿವಿಸಿ ಪೈಪ್, ನೀರಿನ ಸಂಪರ್ಕಗಳನ್ನು ಮನೆಯವರೇ ಮಾಡಿಟ್ಟಿರಬೇಕು. ವಿದ್ಯುತ್ ಸಂಪರ್ಕದ ನಂತರ ವರುಷದೊಳಗೆ ಮೂರು ಬಾರಿ ಪರಿವೀಕ್ಷಣೆ. ಈ ಹಂತದಲ್ಲಿ ಸಣ್ಣ ಪುಟ್ಟ ರಿಪೇರಿಗಳು ಬಂದರೆ ಉಚಿತ.

ಯಾವುದೇ ಘಟಕವು ತಾಂತ್ರಿಕ ದೋಷಗಳಿಂದ ಈವರೆಗೆ ಕೈಕೊಟ್ಟಿಲ್ಲ ಎನ್ನುವ ರತ್ನಾಕರ್ ಕೆಲವು ಸಲ ನೀರ ಹರಿವು ಬೇರೆ ಬೇರೆ ಕಾರಣಗಳಿಂದ ಕಡಿಮೆಯಾದಾಗ ವೋಲ್ಟೇಜ್ ಕಡಿಮೆಯಾಗುತ್ತದೆ. ಕಸಕಡ್ಡಿಗಳು, ಕಪ್ಪೆಗಳು, ಏಡಿಗಳು ಪೈಪಿನೊಳಗೆ ಹೋಗದಂತೆ ಎಚ್ಚರ ಅಗತ್ಯ. ಇದನ್ನು ಬಳಕೆದಾರರು ನಿತ್ಯ ಗಮನಿಸುತ್ತಿದ್ದರೆ ಯಾವುದೇ ಸಮಸ್ಯೆ ಬರುವುದಿಲ್ಲ ಎಂದು ವಿವರಿಸುತ್ತಾರೆ.

ಕಳಸ ಸಮೀಪದ ಗೊರಸುಕುಡಿಗೆಯಲ್ಲಿ ಎಂಟು ಮನೆಗಳಿಗೆ ಹತ್ತು

ಕೆವಿ ಘಟಕದ ಸ್ಥಾಪನೆಗಾಗಿ ಯೋಜನೆ ರೂಪುಗೊಂಡಿದೆ. ಮೂಡಿಗೆರೆ ಸಮೀಪದ ಅಷ್ಟಲಕ್ಷ್ಮಿ ಎಸ್ಟೇಟಿನಲ್ಲಿ ಹತ್ತು ಮನೆ, ಮುತ್ತೋಡಿಯ ಆಶೀರ್ವಾದ ಎಸ್ಟೇಟ್, ಬಾಳೆಹೊನ್ನೂರಿನ ಕಾಂಡ್ಲಾ, ಕೊಟ್ಟಿಗೆಹಾರ ಹೀಗೆ ಎಂಟು ಸ್ಥಳಗಳಲ್ಲಿ ವಿದ್ಯುತ್ ಉತ್ಪಾದಿಸಿ ಹಲವು ಮನೆಗಳಿಗೆ ವಿದ್ಯುತ್ ನೀಡುವ ಸಮುದಾಯ ವ್ಯವಸ್ಥೆ ಯಶಸ್ವಿಯಾಗಿದೆ.

ಸಮುದಾಯ ವ್ಯವಸ್ಥೆಯಿಂದ ಖರ್ಚು ಕಡಿಮೆ. ಎಲ್ಲಾ ಬಳಕೆದಾರರಿಗೂ ಖರ್ಚು ಹಂಚಿ ಹೋಗುವುದರಿಂದ ಆರ್ಥಿಕ ಭಾರ ಹೆಚ್ಚಾಗದು. ನೀರಿನ ಸಂಪನ್ಮೂಲವನ್ನು ವಿದ್ಯುತ್ತಾಗಿ ಪರಿವರ್ತಿಸಿ ಬಳಸಬಹುದು. ಇಲಾಖೆಯತ್ತ ನೋಡಬೇಕಾಗಿಲ್ಲ.

ಸಾಭಾರ – ಅಡಿಕೆ ಪತ್ರಿಕೆ

❖ ❖ ❖

ಸನ್ಮಾನ್ಯರಿಂದ

ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಸುರೇಂದ್ರ ಕೌಲಗಿಯವರ ಮತಾಂತರ : ಮರುಚಿಂತನೆ ಅಗತ್ಯ ಲೇಖನ ಈ ಸಂದರ್ಭಕ್ಕೆ ಉತ್ತಮವಾಗಿ ಹಿಂದೂಧರ್ಮವನ್ನು ಮಾನವಿಯ ಧರ್ಮವನ್ನಾಗಿ ಪರಿವರ್ತನೆಮಾಡಿ ಈ ಧರ್ಮದಿಂದ ಯಾರೂ ಮತಾಂತರಗೊಳ್ಳದಂತೆ ಪ್ರಯತ್ನಿಸಬೇಕಾಗಿದೆ.

ಇಂತಿ
ಬಸಪ್ಪಗೌಡ
ವಕೀಲರು ಕೋಲಾರ

ಬಾಂಬ್ ಅಂದು ಮತ್ತು ಇಂದು

ರಾಜಕಾರಣಕ್ಕೂ ಬಾಂಬಿಗೂ ಒಂದು ಅನೈತಿಕ ಸಂಬಂಧ ಬೆಳೆದು ಬಂದಿದೆ. ಬಾಂಬ್ ಹಿಂಸೆಯ ಪ್ರತೀಕವಾದರೆ, ರಾಜಕಾರಣ ಸಾಂಸ್ಕೃತಿಕ ವಿಚಾರದ ಸಂಕೇತವಾಗಿದೆ.ಆದರೆ ಹಿಂಸೆಂಯು ಸಾಂಸ್ಕ್ರತಿಕ ವಿಚಾರ ಮೇಲುಗೈ ಸಾಧಿಸಿದಾಗಲೆಲ್ಲಾ ಬಾಂಬ್ ಅಸಹನೆಯಿಂದ ಸಿಡಿದೆದ್ದಿದೆ, ರಾಜಕಾರಣದ ಮೌಲಿಕ ಬೆಳವಣಿಗೆಗೆ ದಕ್ಕೆಯನ್ನುಂಟು ಮಾಡಿದೆ. ಇಂತಹ ಬಾಂಬ್ ಮತ್ತು ರಾಜಕಾರಣದ ಮಧ್ಯದ ಅನೈತಿಕ ಸಂಬಂದಕ್ಕೆ ಬಹು ದೀರ್ಘವಾದ ಇತಿಹಾಸವೇ ಇದೆ. ಇದಕ್ಕೆ ಒಂದು ಉದಾಹರಣೆ ಯೇಸುಕ್ರಿಸ್ಥನದು. ಇಡೀ ವಿಶ್ವಕ್ಕೆ ಪ್ರೇಮ ಆಧಾರಿತ ಸಾಂಸ್ಕೃತಿಕ ರಾಜಕಾರಣವನ್ನು ಜನತೆಗೆ ಕಲಿಸಲು ಪ್ರಯತ್ನಿಸಿದ ಯೇಸುವನ್ನು ಮೊಳೆ ಹೊಡೆದು ಸಿಲುಬೆಗೆ ನೇತು ಹಾಕಿದರು. ಆ ಘೋರ ಸಮಯುದಲ್ಲಿ ಯೇಸು ಶಾಂತವಾಗಿದ್ದ ಮತ್ತು ತನ್ನ ಪ್ರಾಣವನ್ನು ತೆಗೆದು ಹಾಕಿದ ಜನರನ್ನು ಕ್ಷಮಿಸಿದ. ಯೇಸುವಿನ ಈ ಅಸಾಧಾರಣ ವರ್ತನೆಯನ್ನು ಜಗತ್ತಿನ ಅತಿ ದೊಡ್ಡ ಸಾಂಸ್ಕೃತಿಕ ರಾಜಕಾರಣದ ಶಿಕ್ಷಣವೆಂದು ಭಾವಿಸಬಹುದು. ಆದರ್ಶ ರಾಜ್ಯದ ಕಲ್ಪನೆಯನ್ನು ಸಮಾಜದ ಮುಂದೆ ಇಡಲು ಪ್ರಯತ್ನಿಸಿದ ಸಾಕ್ರೆಟಿಸನನ್ನು ವಿಷ ಕೊಟ್ಟು ಸಾಯಿಸಲಾಯಿತು. ಆದರೂ ಸಾಕ್ರೆಟಿಸ್ ಪ್ರತಿಪಾದಿಸಿದ ಸತ್ಯ ಆಧಾರಿತ ವಿಚಾರಗಳು ಸಾಯಲಿಲ್ಲ. ಸಾಕ್ರೆಟಿಸ್‌ನ ಈ ಮರಣ ಸಾಂಸ್ಕೃತಿಕ ರಾಜಕಾರಣದ ಶಿಕ್ಷಣದ ಇನ್ನೊಂದು ಮಹತ್ವದ ಪಾಠ ಎಂದೆನ್ನ ಬಹುದು. ಅಮೇರಿಕಾದಲ್ಲಿ ವರ್ಣಭೇದವನ್ನು ತೊಡೆದು ಹಾಕಲು ಪ್ರಯತ್ನಿಸಿದ ಅಬ್ರಾಹಿಂ ಲಿಂಕನ್‌ನನ್ನು ಗುಂಡಿಕ್ಕಿ ಸಾಯಿಸಲಾಯಿತು. ಲಿಂಕನ್‌ನ ಆ ಅಮಾನುಷ ಹತ್ಯೆ ವರ್ಣದ್ವೇಷವನ್ನು ನಿವಾರಿಸಲು ಕಾರಣವಾಯಿತು. ಲಿಂಕನ್‌ನ ಈ ಮರಣ ಸಾಂಸ್ಕೃತಿಕ ರಾಜಕೀಯ ಶಿಕ್ಷಣದ ಇನ್ನೊಂದು ಮಹತ್ವದ ಪಾಠ. ಈ ರೀತಿ ಜಗತ್ತಿನ ಇತಿಹಾಸದಲ್ಲಿ ಸಾಂಸ್ಕೃತಿಕ ರಾಜಕಾರಣ ಮೇಲುಗೈ ಸಾದಿಸಿದಾಗಲೆಲ್ಲಾ ಹಿಂಸಾತ್ಮಕ ರಾಜಕಾರಣ ಗುಂಡು ಅಥವಾ ಬಾಂಬ್ ನಿಂದ ತನ್ನ ಸೇಡನ್ನು ತೀರಿಸಿಕೊಂಡಿದೆ. ವಿಶ್ವಕ್ಕೇ ಒಂದು ಸಾಂಸ್ಕೃತಿಕ ರಾಜಕಾರಣದ ಪಾಠ ಹೇಳಿಕೊಡುವುದರಲ್ಲಿ ತೊಡಗಿ ಅದರಲ್ಲಿ ಯಶಸ್ಸನ್ನು ಪಡೆಯುತ್ತಿದ್ದ ಮಹಾತ್ಮ ಗಾಂಧೀಯ ಬಗ್ಗೆ ಅಸೂಯೆಯನ್ನು ತಾಳಿದ ಹಿಂಸಾತ್ಮಕ ರಾಜಕಾರಣ ಅವರನ್ನು ಬಲಿತೆಗೆದು ಕೊಂಡಿತಾದರೂ ಅವರು ಭೋಧಿಸಿದ್ದ ಸತ್ಯ, ಅಹಿಂಸಾಧಾರಿತ ರಾಜಕಾರಣದ ಪ್ರಸ್ತುತತೆಯನ್ನು ಅವರ ಮರಣ ಸಾರಿಕೊಂಡು ಮುನ್ನಡೆಯುತ್ತಲೆ ಇದೆ. ಗಾಂಧೀಯು

ಹತ್ಯೆಯೊಂದಿಗೆ ಸಾಂಸ್ಕೃತಿಕ ರಾಜಕಾರಣದ ಪಾಠ ಹೇಳುವಂತಹ ಮಹನೀಯರ ಪರಂಪರೆ ನಿಲುಗಡೆಗೆ ಬಂದಿದೆ. ಇನ್ನು ಮುಂದೆ ಎಷ್ಟು ಯುಗಾಂತರಗಳ ನಂತರ ಯೇಸು, ಸಾಕ್ರಟೀಸ್, ಗಾಂಧಿ, ಲಿಂಕನ್, ದಯಾನಂದ ಸರಸ್ವತಿ ಅಥವಾ ಅವರ ಪರಂಪರೆಯನ್ನು ಎತ್ತಿ ಹಿಡಿಯುವಂತಹ ಕಾರಣ ಪುರುಷರು ಹುಟ್ಟುತ್ತಾರೋ ಎಂದು ಹೇಳಲು ಸಾಧ್ಯವಿಲ್ಲ.

ಸಾಂಸ್ಕೃತಿಕ ರಾಜಕಾರಣದ ಬೋಧನೆಯಲ್ಲಿ ತೊಡಗಿದ್ದ ಮಹಾ ಪುರುಷರು ತಮ್ಮ ಹತ್ಯೆಯನ್ನು ಬದುಕಿನ ಸಂಕೀರ್ಣತೆಯ ಒಂದು ಸಹಜ ಭಾಗವೆಂದು ಪರಿಗಣಿಸಿದ್ದರಿಂದ ಅವರ ಹತ್ಯೆಗಳು ಯಾವುದೇ ಪ್ರಕಾರದ ವೈಭವಕ್ಕೊಳಗಾಗದೆ ಜೀವನ ಪ್ರವಾಹದಲ್ಲಿ ತೇಲಿಹೋದವು. ಇಲ್ಲವೆ ಜೀವನ ಸಾಗರದ ತಳವನ್ನು ಸೇರಿದವು. ಮುಂದೆ ಯಾವುದೋ ಶತಮಾನದಲ್ಲಿ ಯಾರೋ ಧೀರರು ಸಾಗರದಾಳದಲ್ಲಿ ಮುಳುಗಿ ಮನುಕುಲಕ್ಕೆ ಸೇರಿದ ಈ ಅನರ್ಘ್ಯ ರತ್ನಗಳನ್ನು ಹೊರಗೆ ತಂದು ಪೂಜಿಸಬಹುದು.

ಆದರೆ ೨೧ನೇ ಶತಮಾನದಲ್ಲಿ ಸಾಂಸ್ಕೃತಿಕ ರಾಜಕಾರಣದ ಬೋಧನಾ ಪರಂಪರೆ ನಿಲುಗಡೆಗೆ ಬಂದಿದೆ. ಅದರ ಸ್ಥಾನದಲ್ಲಿ ಸ್ವಾರ್ಥ ಆಧಾರಿತ ರಾಜಕಾರಣದ ಪರಂಪರೆ ಶುರುವಾಗಿದೆ. ಹೇಗೆ ಹಿಂದಕ್ಕೆ ಸಾಂಸ್ಕೃತಿಕ ರಾಜಕಾರಣದ ಕೈ ಮೇಲಾದಾಗ ಹಿಂಸಾ ರಾಜಕಾರಣ ಸಿಡಿದೆದ್ದಿತೋ ಅದೇ ರೀತಿ ಸ್ವಾರ್ಥ ಆಧಾರಿತ ರಾಜಕಾರಣದ ಕೈ ಮೇಲಾದಾಗ ಇನ್ನೊಂದು ಸ್ವಾರ್ಥ ಆಧಾರಿತ ರಾಜಕಾರಣದ ಬಾಂಬ್ ಸಿಡಿದೇಳುವ ಪರಂಪರೆ ಪ್ರಾರಂಭವಾಗಿದೆ. ಬಾಂಬ್ ಸಿಡಿದಾಗ ಅಥವಾ ಆ ಬಾಂಬಿಗೆ ರಾಜಕಾರಣಿ ಬಲಿಯಾದಾಗ ಎರಡನ್ನೂ ಅತಿಯಾಗಿ ವೈಭವೀಕರಿಸಲಾಗುತ್ತದೆ ಮತ್ತು ಅವುಗಳನ್ನು ಸ್ವಾರ್ಥ ರಾಜಕಾರಣದ ಉದ್ದೇಶಕ್ಕಾಗಿ ಸಫಲತಾಪೂರ್ಣವಾಗಿ ಉಪಯೋಗಿಸಲಾಗುತ್ತದೆ.

ಇದಕ್ಕೆ ಅತ್ಯಂತ ಇತ್ತೀಚಿನ ಉದಾಹರಣೆ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರನ್ನು ನಕ್ಸಲೀಯರು ತಿರುಪತಿಯಲ್ಲಿ ಹತ್ಯೆ ಮಾಡಲು ನಡೆಸಿದ ಪ್ರಯತ್ನ. ನಕ್ಸಲೀಯರ ಈ ಪ್ರಯತ್ನ ಮರಣಾಂತಿಕವಾಗಿದ್ದಾದರೂ ನಾಯ್ಡುರವರು ಅದೃಷ್ಟವಶಾತ್ ಬದುಕುಳಿದರು. ನಾಯ್ಡುರವರು ಬದುಕಿ ಉಳಿದುದ್ದಕ್ಕಾಗಿ ದೇಶದ ಎಲ್ಲಾ ರಾಜಕೀಯ ನಾಯಕರು ಅವರನ್ನು ಅಭಿನಂದಿಸಿದರಲ್ಲದೆ ಎಲ್ಲರೂ ಖುದ್ದು ಭೇಟಿ ಮಾಡಿ ಕ್ಷೇಮ ಸಮಾಚಾರ ವಿಚಾರಿಸಿದರು. ಇವೆಲ್ಲವೂ ಮಾನವೀಯ ವ್ಯವಹಾರ ದೃಷ್ಟಿಯಿಂದ ಸರಿ. ಆದರೆ ನಾವು ಇಲ್ಲಿ ಗಮನಿಸಬೇಕಾದುದು ಈ ದುರ್ಘಟನೆಯ ಸಂದರ್ಭದಲ್ಲಿ ಮತ್ತು ಆನಂತರ ನಾಯ್ಡು ಹೇಗೆ ವರ್ತಿಸಿದರು ಎಂಬುದು. ಈ ಘಟನೆ ಸಂಭವಿಸಿದ ಕೂಡಲೆ ನಾಯ್ಡು ಮತ್ತು ಅವರ ಇನ್ನೊರ್ವ ಮಂತ್ರಿ ಹೆಲಿಕಾಪ್ಟರ್ ಮೂಲಕ

ಹೈದರಾಬಾದಿಗೆ ಪಲಾಯನ ಮಾಡಿದರು. ತಿರುಪತಿ ಮತ್ತು ಸುತ್ತಮುತ್ತ ಕಾಡಿನಲ್ಲಿ ರಣರಂಗ ಸದೃಶವಾದ ಪೋಲಿಸ್ ಕಾರ್ಯಾಚರಣೆಗೆ ಆದೇಶ ನೀಡಿದರು. ಮುಂದೆ ಈ ದುರ್ಘಟನೆಯ ಆಘಾತದಿಂದ ಹೊರ ಬಂದ ಮೇಲೆ ತಮ್ಮ ಪಕ್ಷದ ಸಭೆಯನ್ನು ಕರೆದು ವಿಧಾನಸಭೆ ವಿಸರ್ಜಿಸುವಂತೆಯೂ ಮತ್ತು ಕೂಡಲೇ ಚುನಾವಣೆಯನ್ನು ನಡೆಸಬೇಕೆಂತಲೂ ತೀರ್ಮಾನ ಕೈಗೊಂಡರು. ಇದರ ಹಿಂದೆ ಇರುವ ಉದ್ದೇಶವೇನೆಂದರೆ ತಮ್ಮ ಪ್ರಾಣದ ಮೇಲೆ ಬಂದೊದಗಿದ ವಿಪ್ಪತ್ತಿನ ಕಾರಣದಿಂದಾಗಿ ತಮ್ಮ ಬಗ್ಗೆ ಜನತೆಯಲ್ಲಿ ಉಂಟಾಗಿದ್ದ ಸಹಾನುಭೂತಿಯ ಲಾಭವನ್ನು ಪಡೆದು ಪುನ: ಐದು ವರ್ಷಕ್ಕೆ ಅಧಿಕಾರದ ಗದ್ದುಗೆಯನ್ನು ಏರುವುದೇ ಆಗಿದೆ. ಈ ಎಲ್ಲಾ ಕಥೆ ಇಂದಿನ ಒಂದು ಸ್ವಾರ್ಥ ರಾಜಕಾರಣದ ಮೇಲೆ ಇನ್ನೊಂದು ಸ್ವಾರ್ಥ ರಾಜಕಾರಣದ ಬಾಂಬಿನ ಕಥೆ.

೧೯೪೮ ಭಾರತ ಇಬ್ಭಾಗವಾದ ೩ನೇಯ ವರ್ಷ ದೇಶದ ತುಂಬೆಲ್ಲಾ ವ್ಯಾಪಕವಾದ ಕೋಮು ಗಲಭೆಗಳು ಪ್ರಾರಂಭವಾದವು. ಹಿಂದೂ ಮತ್ತು ಮುಸ್ಲಿಮರು ಆಜನ್ಮ ಶತ್ರುಗಳಂತೆ ಪರಸ್ಪರ ಕಾದಾಡಿ, ರಕ್ತದ ಕೋಡಿಯನ್ನೇ ಹರಿಸಿದರು. ಈ ಎರಡೂ ಕೋಮಿನವರಿಗೆ ಸೂಕ್ತ ತಿಳುವಳಿಕೆ ನೀಡಿ ಅವರಿಬ್ಬರಲ್ಲಿ ಸೌಹಾರ್ದತೆಯನ್ನು ಸ್ಥಾಪಿಸಲು ಗಾಂಧೀ ಪ್ರಯತ್ನಿಸುತ್ತಿದ್ದರು. ಅವರು ಎಂದಿನಂತೆ ಪ್ರಾರ್ಥನೆಯಲ್ಲಿದ್ದಾಗ ಅವರ ಹತ್ಯೆಗಯ್ಯಲು ಅವರತ್ತ ಬಾಂಬನ್ನು ಕೇವಲ ೧೨೫ ಅಡಿ ದೂರದಿಂದ ಎಸೆಯಲಾಯಿತು. ಅದೃಷ್ಟವಶಾತ್ ಅದು ಅವರಿಗೆ ತಾಗಲಿಲ್ಲ. ಪ್ರಾರ್ಥನೆಗಾಗಿ ನೆರೆದಿದ್ದ ಜನಸ್ತೋಮದಲ್ಲಿ ಹಾಹಾಕಾರ ಉಂಟಾಯಿತು. ಆದರೆ ಗಾಂಧೀ ವಿಚಲಿತರಾಗದೇ ಸಭಾಸ್ಥಳದಲ್ಲೇ ಕುಳಿತು ಶಾಂತಿಯನ್ನು ಸ್ಥಾಪಿಸಲು ಪ್ರಯತ್ನಪಟ್ಟರು. ಮಾರನೆಯ ದಿನ ದೇಶವೆಲ್ಲಾ ಗಾಂಧೀಜಿಯವರನ್ನು ಅಭಿನಂದಿಸಿತು. ಅದಕ್ಕೆ ಗಾಂಧೀಜಿ ಕೊಟ್ಟ ಉತ್ತರ ಬಹಳ ಮಾರ್ಮಿಕವಾಗಿದೆ. " ಈ ಬಾಂಬ್ ಎಸೆತ ನನಗೆ ಗೊತ್ತಿಲ್ಲದಂತೆ ಆಗಿದೆ. ಆದ್ದರಿಂದ ನಾನು ವಿಚಲಿತವಾಗದೇ ಇದ್ದದ್ದು ದೊಡ್ಡ ಸಂಗತಿಯಲ್ಲ. ಒಂದು ವೇಳೆ ಈ ಬಾಂಬ್ ಎಸೆತದ ವಿಷಯ ನನಗೆ ಮುಂಚೆ ಗೊತ್ತಿದ್ದು, ಆನಂತರ ಬಾಂಬ್ ಎಸೆದಿದ್ದರೆ ನಾನು ಯಾವ ರೀತಿ ಪ್ರತಿಕ್ರಿಯಿಸುತ್ತಿದ್ದೆನೆಂಬುದು ಮುಖ್ಯ".

ಗಾಂಧೀ ಸಹ ಒಬ್ಬ ರಾಜಕಾರಣಿಯಾಗಿದ್ದರು. ಆದರೆ ಅವರಿಗೆ ಅಧಿಕಾರದ ಯಾವ ಆಸೆಯೂ ಇರಲಿಲ್ಲ. ಅಪರಾಧಿಯನ್ನು ಕ್ಷಮಿಸುವಂತೆಯೂ ಹೇಳಿದರು. ಹಿಂದೂ-ಮುಸ್ಲಿಂ ಐಕ್ಯತೆಯನ್ನು ಕುರಿತು ಇನ್ನೂ ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡಿದರು. ಇದು ಅಂದಿನ ಸಾಂಸ್ಕೃತಿಕ ರಾಜಕಾರಣದ ಹಿಂದೆ ಇದ್ದ ಬಾಂಬಿನ ಕಥೆ.

-ಸು.ಕೌ

ಪುಸ್ತಕ ವಿಚಾರ

೧. ಮುಗಿಲ ಸಾಲು

ಲೇಖಕ: ಡಾ:ವಸಂತಕುಮಾರ ಪೆರ್ಲ

ಈ ಪುಸ್ತಕದ ಲೇಖಕರು ಈಗಾಗಲೇ ಕವಿಯಾಗಿ ಮತ್ತು ಲೇಖಕರಾಗಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಅವರ ಲೇಖನಿಯಿಂದ ಇತ್ತೀಚೆಗೆ ಹೊರಬಂದಿರುವ ಪುಸ್ತಕ ಮುಗಿಲ ಸಾಲು. ಈ ಪುಸ್ತಕದಲ್ಲಿ ಲೇಖಕರು ಬೇರೆ ಬೇರೆ ಸಂದರ್ಭದಲ್ಲಿ ಬರೆದ ಪ್ರಬಂಧಗಳ ಸಂಗ್ರಹವಿದೆ. ಈ ಪ್ರಬಂಧಗಳು ಸಾಹಿತ್ಯ, ಸಂಗೀತ, ಪತ್ರಿಕೋದ್ಯಮ, ಪರಿಸರ ಇತ್ಯಾದಿ ಹಲವಾರು ವಿಷಯಗಳನ್ನು ಕುರಿತ್ತದ್ದಾಗಿದೆ. ಪ್ರಬಂಧಗಳು ಚಿಕ್ಕದಾಗಿದ್ದರೂ ಸಹ ಅನೇಕ ಮಾಹಿತಿಗಳನ್ನು ಒಳಗೊಂಡಿವೆ. ಪ್ರಬಂಧಗಳ ಭಾಷೆ ಆಸಕ್ತಿದಾಯಕವಾಗಿದೆ ಮತ್ತು ವಿಷಯಕ್ಕೆ ಅನುಗುಣವಾಗಿ ಶಿಸ್ತಿಗೆ ಬದ್ಧವಾಗಿದೆ. ಈ ಪುಸ್ತಕದಲ್ಲಿ ಒಟ್ಟು ೧೭ ಪ್ರಬಂಧಗಳಿವೆ. ಕೆಲವು ಪ್ರಬಂಧಗಳಲ್ಲಿ ಕೆಲವು ಸೂತ್ರವತ್ತಾದ ವಾಕ್ಯಗಳಿವೆ. ಈ ಪುಸ್ತಕ ಸಾಹಿತ್ಯದಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿದೆ.

ಈ ಪುಸ್ತಕವನ್ನು ಸಾಹಿತ್ಯಸಂಘ, ಬದಿಯಡ್ಕ,ಕಾಸರಗೋಡು ಇವರಿಂದ ಪ್ರಕಟಗೊಂಡಿದೆ. ೧೩೨ ಪುಟಗಳ ಈ ಪುಸ್ತಕದ ಬೆಲೆ ೯೦/-ರೂಪಾಯಿ.

---

೨. ಭಾರತೀಯ ಹಬ್ಬಗಳ ವೈಶಿಷ್ಟ್ಯ

ಲೇಖಕರು: ಪ್ರೊ : ಬಿ.ಎನ್.ಭಟ್ಟ

ಈ ಗ್ರಂಥವು ಹಿಂದೂ ಧರ್ಮದಲ್ಲಿರುವ ಅನೇಕ ಬಗೆಯ ಹಬ್ಬಗಳ ಪರಿಚಯವನ್ನು ಮಾಡಿಕೊಡುತ್ತದೆ. ಹಬ್ಬಗಳ ಪ್ರಿಯರಾದ ಹಿಂದೂಗಳು ಹಬ್ಬಗಳನ್ನು ಆಚರಿಸುತ್ತಾರಾದರೂ ಆ ಹಬ್ಬಗಳ ಅರ್ಥ, ಹಿನ್ನಲೆ ಹಾಗೂ ವೈಶಿಷ್ಟ್ಯ ಇತ್ಯಾದಿಗಳನ್ನು ತಿಳಿದಿರುವುದಿಲ್ಲ. ಹಬ್ಬಗಳ ಆಚರಣೆ ಕೇವಲ ಊಟ, ಬಟ್ಟೆ, ಆಡಂಬರಗಳಿಗೆ ಸೀಮಿತವಾಗಿರುತ್ತದೆ. ಹಬ್ಬದ ಆಚರಣೆಯಿಂದ ದೊರೆಯಬೇಕಾದ ನಿಜವಾದ ಆನಂದ, ಸುಖ ಮತ್ತು ಶಾಂತಿ ದೊರೆಯುವುದಿಲ್ಲ. ಅನೇಕ ಸಲ ಹಬ್ಬಗಳ ಆಚರಣೆ ನೀರಸವಾಗುತ್ತದೆ ಮತ್ತು ಅನಾವಶ್ಯಕ ಖರ್ಚಿನ ಸಂದರ್ಭವೆಂದು ಅನಿಸುತ್ತದೆ. ಆದರೆ ಹಬ್ಬಗಳು ಸಂಸ್ಕೃತಿಯ ಸಂಕೇತಗಳಾಗಿವೆ. ಅವುಗಳ ಹಿಂದೆ ನಿರ್ಧಿಷ್ಟವಾದ ಉದ್ದೇಶಗಳಿವೆ ಮತ್ತು ಉನ್ನತವಾದ ವಿಚಾರಗಳಿವೆ. ಹಬ್ಬಗಳ ಹಿಂದಿರುವ ಈ ವಿಚಾರ ಮತ್ತು ಉದ್ದೇಶಗಳನ್ನು ತಿಳಿದುಕೊಂಡಲ್ಲಿ ಹಬ್ಬಗಳ ಆಚರಣೆಯಲ್ಲಿ ಹೆಚ್ಚಿನ ಉತ್ಸಾಹ ಮೂಡುತ್ತದಲ್ಲದೇ ಮನಸ್ಸಿಗೆ ಸಂತೋಷವೂ ಆಗುತ್ತದೆ. ಕುಟುಂಬದ ಸದಸ್ಯರಿಗೆಲ್ಲಾ ಸುಖ ನೆಮ್ಮದಿಯನ್ನು ತಂದುಕೊಡುತ್ತದೆ. ಈ ಹಿನ್ನಲೆಯಲ್ಲಿ ಪ್ರೋ: ವಿ.ಎನ್.ಭಟ್ಟರವರ ಈ ಗ್ರಂಥವು ಒಂದು ಒಳ್ಳೆಯ ಕೈಪಿಡಿಯಾಗಿ ಆಸಕ್ತರಿಗೆ ದೊರೆತಿದೆ. ಈ ಗ್ರಂಥದಲ್ಲಿ ೩೦ ಹಬ್ಬಗಳ ಪರಿಚಯವನ್ನು ಮಾಡಿಕೊಡುವುದರ ಜೊತೆಗೆ ಕ್ರಿಸ್‌ಮಸ್ ಹಾಗೂ ಮಹಮದೀಯರ ಕೆಲ ಹಬ್ಬಗಳನ್ನು ಸಹ ಪರಿಚಯ ಮಾಡಿಕೊಡಲಾಗಿದೆ. ಈ ಪುಸ್ತಕವನ್ನು ವಿಶ್ವನಾಥ್ ಪ್ರಕಾಶನ, ಜ್ಞಾನದೀಪ, ಸಹ್ಯಾದ್ರಿ ನಗರ, ೩ನೇ ಮೈನ್, ಶಿವಮೊಗ್ಗ ಇವರು ಪ್ರಕಟಿಸಿದ್ದಾರೆ. ೧೭೩ ಪುಟಗಳ ಈ ಪುಸ್ತಕದ ಬೆಲೆ ೫೦/-ರೂಪಾಯಿಗಳು.

೧೩ನೇ ಪುಟದಿಂದ. . .

ಕಾರಣದಿಂದಾಗಿ ಕರ್ನಾಟಕದ ರೈತರು ಅತಂತ್ರರಾಗಿ ಉಳಿದಿದ್ದಾರೆ.

ದಲಿತಸಂಘರ್ಷ ಸಮಿತಿಯು ನಡೆಸುತ್ತಿರುವ ಆಂದೋಲನ, ನಿಜವಾದ ಅರ್ಥದಲ್ಲಿ ಇನ್ನೂ ಜನಾಂದೋಲನವಾಗಿ ರೂಪುಗೊಳ್ಳಬೇಕಾಗಿದೆ. ಸಮಿತಿಯ ಈ ಆಂದೋಲನವು ಹಿಂಸಾಚರಣೆಯಿಂದ ದೂರವಿದ್ದರೂ ತನ್ನ ಹೆಸರಿನಲ್ಲಿ ಸಂಘರ್ಷ ಎಂಬ ಹೆಸರನ್ನು ಸೇರಿಸಿಕೊಂಡಿರುವುದು ಅದು ಜನಾಂದೋಲನವಾಗಿ ರೂಪುಗೊಳ್ಳಲು ಅಡ್ಡಿಯಾಗಿದೆಯೇನೋ ಅನಿಸುತ್ತದೆ. ಏಕೆಂದರೆ ದಲಿತರ ಸಮಸ್ಯೆ ಕೇವಲ ದಲಿತರೆಂದೆನಿಸಿ ಕೊಳ್ಳುವವರಿಗೆ ಮಾತ್ರ ಸೀಮಿತವಲ್ಲ. ಅದು ಇಂದಿನ ಇಡೀ ಸಮಾಜ ವ್ಯವಸ್ಥೆಗೆ ಸಂಬಂಧಿಸಿದ ವಿಷಯವಾಗಿದೆ. ದಲಿತ ಎಂಬ ಪದದ ಹಿಂದಿರುವ ಅರ್ಥಕ್ಕೆ ಒಳಪಡುವಂತಹ ಶೋಷಿತ ಜನ, ಸಮಾಜದ ಎಲ್ಲಾ ವರ್ಗಗಳಲ್ಲಿಯೂ ಇದ್ದಾರೆ. ಈಗ ಇರುವ ಸ್ಥಿತಿಯಲ್ಲಿ ದಲಿತ ಸಂಘರ್ಷದ ಹೋರಾಟವೆಂದರೆ ಕೇವಲ ದಲಿತರಿಗೆ ಮಾತ್ರ ಸೇರಿದ್ದೆಂಬ ಭಾವನೆ ಜನರಲ್ಲಿ ಮೂಡುತ್ತದೆ. ಅಲ್ಲದೆ ಈ ಸಂಘರ್ಷವೆಂಬುದು ಯಾವ ಪ್ರಕಾರದ ಜನರ ವಿರುದ್ಧ ಮತ್ತು ಯಾವ ಪ್ರಕಾರದ ಅನ್ಯಾಯಗಳ ವಿರುದ್ಧ ಎಂಬುದು ಸ್ಪಷ್ಟವಾಗಿರದೆ ಬಹಳ ವ್ಯಾಪಕಾರ್ಥದಲ್ಲಿ ಅದನ್ನು ಉಪಯೋಗಿಸಲಾಗುತ್ತಿದೆ. ಆದ್ದರಿಂದ ದಲಿತ ಚಳುವಳಿಯಲ್ಲಿ ಕ್ರಿಯಾ ಶೀಲರಾದಂತವರಿಗೆ ತಮ್ಮ ಹೋರಾಟದ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಇರುವಂತೆ ಅನ್ನಿಸುವುದಿಲ್ಲ. ದಲಿತರ ಚಳುವಳಿಯು ಸಹ ತಾನೊಂದು ರಾಜಕೀಯ ಪಕ್ಷವಾಗಿ ರೂಪುಗೊಳ್ಳ ಬೇಕೆಂಬ ಕನಸನ್ನು ಕಾಣುತ್ತಿರುವಂತೆ ಭಾಸವಾಗುತ್ತಿದೆ. ನಿಜವಾದ ಅರ್ಥದಲ್ಲಿ ದಲಿತರ ಸಮಸ್ಯೆಯ ಪರಿಹಾರ, ರಾಜಕೀಯವಾಗಿರದೆ ಅಂದೊಂದು ವ್ಯಾಪಕವಾದ ಸಾಮಾಜಿಕ ಸುಧಾರಣೆಯ ಕೆಲಸವಾಗಿದೆ. ಆ ಚಳುವಳಿಯ ಹಿಂದೆ ಇರುವ ಉದ್ದೇಶ್ಯಗಳು ಮಹತ್ತರವಾಗಿದ್ದರೂ ಸಂಘರ್ಷವೆಂಬ ಹೆಸರಿರುವುದರಿಂದ ಜನಾಂದೋಲನವಾಗಿ ರೂಪುಗೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ದಲಿತರ ಏಳಿಗೆಯನ್ನು ಕುರಿತು ಕೆಲಸಮಾಡಿದ ಇಬ್ಬರು ಮಹಾನ್ ನಾಯಕರಾದ ಅಂಬೇಡ್ಕರ್ ಮತ್ತು ಗಾಂಧೀ ಹಿಂಸೆ ಅಥವಾ ಸಂಘರ್ಷದ ಮಾತನ್ನು ಆಡಲಿಲ್ಲ. ಅವರು ಅದನ್ನು ಕಾನೂನಿನ ಚೌಕಟ್ಟಿನಲ್ಲಿ ಬಗೆಹರಿಸಲು ಪ್ರಯತ್ನಿಸಿದರು.

-ಸುರೇಂದ್ರ ಕೌಲಗಿ

KA-SKMND-470-2003-05
Regd. no. KAR/KAN/2000/3820

ತೆರೆದ–ಅಂಚೆ

TO,

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ® . Melkote. Dist- mandya – 571431
Phone : 08236 – 296754 e-mail : janapada@yahoo.com